ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 10 ಸಂ. 2 ಫೆಬ್ರವರಿ 2013 ರೂ.25

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
ಅನು: ಶ್ಯಾಮಲಾದೇವಿ
(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)

ನನ್ನ ಜೀವನ ಅಮರರವರಿಂದ ತುಂಬಿಕೊಂಡಿದೆ. ಅವರನ್ನು 1977ರಲ್ಲಿ ಸಂಧಿಸಿದ ನಂತರವಷ್ಟೇ, ನಾನು ನಿಜವಾಗಿಯೂ ಬದುಕಲು ಪ್ರಾರಂಭಿಸಿದೆ. ನಾನು ಅನೇಕ ವಸ್ತುಗಳನ್ನು ಮತ್ತು ಅನೇಕ ಜನರನ್ನು ತೊರೆದೆ, ಆದರೆ ಅಮರರವರನ್ನು ತೊರೆಯಲಿಲ್ಲ. ಅಥವಾ ಅಮರರವರು ಅವರ ಮರಣದ ನಂತರವೂ ನನ್ನನ್ನು ತೊರೆಯಲಿಲ್ಲ ಎಂದು ನಾನು ಹೇಳಬೇಕು. ನಾನು ಯಾವುದೇ ತೊಂದರೆಯಲ್ಲಿದ್ದರೂ ಅಥವಾ ಸಂದಿಗ್ಧತೆಯಲ್ಲಿದ್ದರೂ ಅಮರರವರು ನನ್ನನ್ನು ಮಾರ್ಗದರ್ಶಿಸಿದರು. ಅವರು ನನಗೆ ಪುಸ್ತಕಗಳಲ್ಲಿಲ್ಲದ ವಿಷಯಗಳನ್ನು ಕಲಿಸಿದರು. ಅವರು ನನ್ನ ಜೀವನಕ್ಕೊಂದು ದಿಶೆ ಮತ್ತು ಧ್ಯೇಯವನ್ನು ಕೊಟ್ಟರು. ನಾನು ಸಾವಿರ ವರ್ಷಗಳ ಪರಿಶ್ರಮದ ನಂತರವೂ ತಲುಪಲಾರದಂಥ ಉನ್ನತ ಸ್ತರಗಳಿಗೆ ಅವರು ನನ್ನನ್ನು ಕರೆದೊಯ್ದರು. ಅವರು ಹಿಂದೆ ಬಿಟ್ಟುಹೋಗಿರುವ ಕೆಲಸಕ್ಕೆ, ನನ್ನ ಈ ಜೀವನ ಮತ್ತು ಮುಂದಿನ ಜೀವನಗಳನ್ನು ಮುಡಿಪಾಗಿಟ್ಟರೂ ಸಹ, ಅದು ನನ್ನ ಪ್ರೀತಿ ಮತ್ತು ಕೃತಜ್ಞತೆಗಳನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲಾರದು.

ಒಂದು ಸಾರಿ ಅಮರರವರು ಒಂದು ಸ್ಟೂಲಿನ ಮೇಲೆ ಇಡೀ ಒಂದು ದಿನ ಕುಳಿತಿರುವಂತೆ ಋಷಿಗಳಿಂದ ಆಣತಿಯಾಯಿತು. ಅವರು ಅದರಂತೆಯೇ ಕುಳಿತರು. ಅವರ ಸುತ್ತಲಿದ್ದ ಜನರು ಅವರನ್ನು ನೋಡಿ ನಕ್ಕು, ತಮಾಷೆ ಮಾಡಿದರು. ಅಮರರವರೂ ನಕ್ಕು, ಆ ದಿನವಿಡೀ ಕುಳಿತರು. ಅವರು ಮೀಸೆ ಬಿಟ್ಟಿದ್ದರು ಮತ್ತು ಜುಬ್ಬ-ಧೋತಿ ಧರಿಸುತ್ತಿದ್ದರು. ಋಷಿಗಳು ಒಮ್ಮೆ ಹೇಳಿದರು, 'ಬದಲಿಸು'. ಅವರು ತಮ್ಮ ಮೀಸೆಯನ್ನು ತೆಗೆದುಹಾಕಿದರು ಮತ್ತು ಆಧುನಿಕ ಉಡುಪನ್ನು ಧರಿಸಲು ಪ್ರಾರಂಭಿಸಿದರು. ಅವರು ಋಷಿಗಳನ್ನು ಎಂದೂ 'ಏಕೆ' ಎಂದು ಕೇಳಲಿಲ್ಲ, ಎಂದೂ ಪ್ರಶ್ನಿಸಲಿಲ್ಲ. ಅವರು ಋಷಿಗಳು ಹೇಳಿದಂತೆಯೇ ಮಾಡುತ್ತಿದ್ದರು. ಅವರು ವಿವರಿಸಿ ಹೇಳುತ್ತಿದ್ದುದು ನನಗೆ ಇನ್ನೂ ನೆನಪಿದೆ, ನಾವು ನಮ್ಮ ಮಾಸ್ಟರ್‌ಗಳ ಕೈಗಳಲ್ಲಿನ ಸಾಧನವಾಗಿರಬೇಕು "ನಮಗೆ ಇದನ್ನು ಮಾಡಲಾಗದಿದ್ದರೆ, ನಾವು ಹೇಗೆ ದೇವರಿಗೆ ಶರಣಾಗಲು ಸಾಧ್ಯ?"

ನಾನು ಇವನ್ನು ಸ್ಮರಿಸಿಕೊಳ್ಳುತ್ತಿರುವಂತೆಯೇ, ನನ್ನ ಸುತ್ತ ಇರುವ ಸಾಧಕರು ಒಂದು ಸನ್ನಿವೇಶದ ಬಗ್ಗೆ, ಋಷಿಗಳು ನಮಗೆ ತೋರಿಸಿಕೊಟ್ಟಿರುವ ದಾರಿಯಿಂದ ಬೇರೆಯಾದ ದಾರಿಯನ್ನು ಹಿಡಿಯಲು ಒತ್ತಡ ತರುವಂಥ ವ್ಯಾವಹಾರಿಕ ದಾರಿಯ ಬಗ್ಗೆ ನನ್ನ ಮನವೊಲಿಸಲು ಪ್ರಯತ್ನಿಸುವುದನ್ನು ನೋಡಿ ನನಗೆ ತಮಾಷೆ ಎನಿಸುತ್ತದೆ. ನಮಗೆ ಹಸ್ತಾಂತರವಾಗುತ್ತಿರುವ ಈ ಜ್ಞಾನ, ಸ್ವತಃ ಋಷಿಗಳಿಂದ ಈ ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲ್ಪಟ್ಟಿದೆ ಮತ್ತು ಯೋಗದ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ ಬರೆಯುವ ಕಾಲ ಬಂದಿದೆ ಎಂದು ನಾನು ವಿವರಿಸಿ ಹೇಳುವುದನ್ನು ಕೇಳಿಸಿಕೊಂಡ ನಂತರವೂ, ಜನರು ಪುಸ್ತಕಗಳಿಂದ ಅದರಲ್ಲೂ ವಿದೇಶೀಯರಿಂದ ಬರೆಯಲ್ಪಟ್ಟ ಪುಸ್ತಕಗಳಿಂದ ಉಲ್ಲೇಖಿಸುತ್ತಾರೆ.

ನಾನು ವಿವರಿಸಿರುವ ಜ್ಞಾನ ಹರಡುವುದಕ್ಕೆ ಮತ್ತು ಮನದಾಳಕ್ಕೆ ಇಳಿಯಲು ಅವಕಾಶ ನೀಡಿ, ನಾನು ಇನ್ನೂ ಕೆಲಕಾಲ ಬಹುಶಃ ಕಾಯಬೇಕು. ಪುಸ್ತಕಗಳನ್ನು ಪ್ರಕಟಿಸಿ ಅಥವಾ ವಿದೇಶ ಪ್ರವಾಸಗಳನ್ನು ಮಾಡಿ, ನಾನು ದೊಡ್ಡ ಹೆಸರು ಮಾಡಿ, ಪ್ರಚಾರ ಮಾಡಿಕೊಳ್ಳಬೇಕೇನೋ. ಅಥವಾ ಈ ವಿಷಯಗಳ ಬಗ್ಗೆ ನಾನು ಚಿಂತಿಸಬೇಕೇ? ಅಮರರವರು ಇವುಗಳ ಬಗ್ಗೆ ಚಿಂತಿಸಲಿಲ್ಲ! ಅವರು ಹೇಳುತ್ತಿದ್ದರು "ನೀವು ಕೆಲಸಕ್ಕೆ ಬಹಳ ಮುಖ್ಯವಾಗಿ ಮತ್ತು ಅಗತ್ಯವಾಗಿ ಬೇಕಾಗಿರುವ ವ್ಯಕ್ತಿ ಎಂದು ತಿಳಿದುಕೊಳ್ಳಬೇಡಿ. ಇದು ನಿಮಗೆ ನೀಡಿರುವ ಒಂದು ಅವಕಾಶ. ನೀವು ಮುಂದೆ ಬರದಿದ್ದರೆ, ಬೇರೆಯವರು ಸಿದ್ಧರಾಗಿರುತ್ತಾರೆ.... ಕಳೆದುಕೊಳ್ಳುವವರು ನೀವೇ, ಋಷಿಗಳಲ್ಲ." ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
© (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫ಼ೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/– ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**ಗುರೂಜಿಯವರ ಅಂತ್ಯಕ್ರಿಯೆ ನಡೆದ ತಪೋವನದಲ್ಲಿ ಕಟ್ಟಿರುವ ಪಿರಮಿಡ್ ಆಕಾರದ ಪ್ರಾರ್ಥನಾ ಮಂದಿರ**

## ಸುದ್ದಿ–ಸೂಚನೆ

- 3–2–2013 ರಂದು ತಪೋನಗರದಲ್ಲಿ ನಡೆಯುವ ಅಮರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರು ದಿನಾಂಕ 30–1–2013 ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕು.
- 3–2–2013 ರಂದು ತಪೋನಗರದಲ್ಲಿ ನಡೆಯುವ ಅಮರ ಜಯಂತಿ ಕಾರ್ಯಕ್ರಮದಲ್ಲಿ– "Quotes from the Rishis Vol.2" ಪುಸ್ತಕ ಹಾಗೂ ಗುರೂಜಿಯವರ ಅನೌಪಚಾರಿಕ ಮಾತುಕತೆಯ ಕೆಲವು ವೀಡಿಯೋಗಳನ್ನೊಳಗೊಂಡ ಡಿವಿಡಿಯ ಬಿಡುಗಡೆಯನ್ನು ಹಮ್ಮಿಕೊಳ್ಳಲಾಗಿದೆ.
- 2013ರ ಡೆಸ್ಕ್ ಕ್ಯಾಲೆಂಡರ್ ಲಭ್ಯವಿದೆ. ವಿವರಗಳಿಗಾಗಿ ಮಾನಸ ಆಫೀಸನ್ನು ಸಂಪರ್ಕಿಸಿ.
- 25–12–2012ರಂದು ತಪೋವನದಲ್ಲಿ ಗುರೂಜಿಯವರ ದೇಹಸಂಸ್ಕಾರವಾದ ಸ್ಥಳದಲ್ಲಿ ನಿರ್ಮಿಸಲಾದ ಪಿರಮಿಡ್ ಆಕಾರದ ಕಟ್ಟಡವನ್ನು ಚೈತನ್ಯೀಕರಿಸಲಾಯಿತು. ಈ ಸಂದರ್ಭದಲ್ಲಿ 700ಕ್ಕೂ ಹೆಚ್ಚು ಜನರು ತಪೋವನದ ಪಾರ್ಕಿಂಗ್ ಸ್ಥಳದಲ್ಲಿ ಸೇರಿ 12 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುವುದರ ಮೂಲಕ ಆ ಕಟ್ಟಡವನ್ನು ಚೈತನ್ಯೀಕರಿಸಿದ್ದಾರೆ.
- ಈ ಸಂದರ್ಭದಲ್ಲಿ ಗುರೂಜಿಯವರ ಕೆಲವು ಮುಖ್ಯ ಉಪನ್ಯಾಸಗಳನ್ನು ಮತ್ತು ಒಂದು ಸಂಕ್ಷಿಪ್ತ ಫೋಟೋ ಬಯೋಗ್ರಾಫಿಯನ್ನೊಳಗೊಂಡ ಡಿವಿಡಿಯನ್ನು ಬಿಡುಗಡೆ ಮಾಡಲಾಯಿತು. ಇದರ ಪ್ರತಿಯನ್ನು ಪಡೆಯಲು ಇಚ್ಛಿಸುವವರು ದಯವಿಟ್ಟು ನಮಗೆ ಬರೆದು ತಿಳಿಸಿ.

ನಮ್ಮ ಸಾಧಕರಿಗೆ ಕಳುಹಿಸುತ್ತಿರುವ ಡಿವಿಡಿಗಳನ್ನು ನಾವು ನಿಲ್ಲಿಸುತ್ತಿದ್ದೇವೆ. ಈಗ ನಾವು ಗುರೂಜಿಯವರ ಹಿಂದಿನ ಕೆಲವು ಉಪನ್ಯಾಸಗಳನ್ನು ತಪೋನಗರದಲ್ಲಿ ನಡೆಯುವ ಭಾನುವಾರದ ತರಗತಿಗಳಲ್ಲಿ ಕೇಳುತ್ತಿದ್ದೇವೆ. ಅದರಲ್ಲಿ ಕೆಲವು ಉಪನ್ಯಾಸಗಳು ಪುನರಾವರ್ತನೆಗೊಂಡಿದ್ದರೂ, ಸಾಧಕರು ಡಿವಿಡಿಗಳನ್ನು ಹೊಂದಲು ಬಯಸಿದಲ್ಲಿ ಜನವರಿ 30ರೊಳಗೆ ನಮಗೆ ಬರೆದು ತಿಳಿಸಬೇಕಾಗಿ ವಿನಂತಿ. ಈ ಡಿವಿಡಿಗಳ ಚಂದಾದಾರರು ಸಾಕಷ್ಟು ಸಂಖ್ಯೆಯಲ್ಲಿದ್ದರೆ ಮಾತ್ರ ನಮಗೆ ಅದನ್ನು ಮುಂದುವರೆಸಲು ಸಾಧ್ಯ.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಶುಕ್ರ | ಅಮರ ಜಯಂತಿ |
| 03 | ಭಾನು | ಅಮರ ಜಯಂತಿ ಆಚರಣೆ<br>ಕೃಷ್ಣ ಅಷ್ಟಮಿ |
| 08 | ಶುಕ್ರ | ಮಾಸ ಶಿವರಾತ್ರಿ |
| 10 | ಭಾನು | ಅಮಾವಾಸ್ಯೆ |
| 17 | ಭಾನು | ರಥಸಪ್ತಮಿ |
| 18 | ಸೋಮ | ಶುಕ್ಲ ಅಷ್ಟಮಿ |
| 20 | ಬುಧ | ಶುಕ್ಲ ದಶಮಿ |
| 25 | ಸೋಮ | ಪೂರ್ಣಿಮಾ |

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11–12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12–1 |
| 03–02–13 | ಅಮರ ಜಯಂತಿ ಆಚರಣೆ |

## ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮ
## ಭಾನುವಾರ, 03–02–2013

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ಪುಸ್ತಕ ಮತ್ತು ಡಿವಿಡಿ ಬಿಡುಗಡೆ<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಆನೇಕಲ್ ಕಾರ್ಯಕ್ರಮ

ಅಮರ ಜಯಂತಿ ಕಾರ್ಯಕ್ರಮವನ್ನು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ 01–02–2013ರಂದು ಮಧ್ಯಾಹ್ನ 12 ಘಂಟೆಗೆ ಆಯೋಜಿಸಲಾಗಿದೆ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದು.



ಗುರೂಜಿಯವರು ಇಲ್ಲಿ ಇದಕ್ಕಿಂತ ಸಣ್ಣ ಗುಡಿಸಲಿನಲ್ಲಿದ್ದುಕೊಂಡು ಮಾನಸ ಫೌಂಡೇಶನ್ ಅನ್ನು ಅಮರ ಜಯಂತಿಯಂದು (01.02.1988) ಸ್ಥಾಪಿಸಿದರು.

## ಮಾನಸ ಫೌಂಡೇಶನ್‌ನ 25ನೆಯ ವಾರ್ಷಿಕೋತ್ಸವ

ಫೆಬ್ರವರಿ 1, 2013ಕ್ಕೆ ಸಪ್ತಋಷಿಗಳ ಮಾರ್ಗವಾದ ಮಾನಸ ಫೌಂಡೇಶನ್ ಸ್ಥಾಪನೆಯಾಗಿ 25 ವರ್ಷಗಳಾದವು. 1988ರ ಅದೇ ದಿನದಂದು ಧ್ಯಾನ ಮಾಡಿದ ಮೇಲೆ ಗುರೂಜಿಯವರು ತಾವು ವಾಸಿಸುತ್ತಿದ್ದ ಸಣ್ಣ ಗುಡಿಸಲಿನಲ್ಲಿ ಮಹಾನ್ ಋಷಿಗಳ ನಿರ್ದೇಶನದಂತೆ ಮಾನಸ ಫೌಂಡೇಶನ್ ಅನ್ನು ಸ್ಥಾಪಿಸಿದರು.

ಈ ಅವಧಿಯಲ್ಲಿ ಗುರೂಜಿಯವರು ಪರಿಪೂರ್ಣ ಸತ್ಯ ಮತ್ತು ದಿವ್ಯಪ್ರೇಮದ ಪವಿತ್ರ ಮೌಲ್ಯಗಳಿಂದ ಈ ಪೂಜ್ಯ ಮಾರ್ಗವನ್ನು ಪೋಷಿಸಿಕೊಂಡು ಬಂದರು. ಅವರ ನಿಷ್ಕಳಂಕತೆ ಹಲವಾರು ಸಂಕಷ್ಟಗಳ ಬಿರುಗಾಳಿಗಳನ್ನೆದುರಿಸಿದೆ; ಅವರ ದೃಢನಿಷ್ಠೆಯಿಂದಾಗಿ ಈ ಮಾರ್ಗವು ವ್ಯಾಪಾರೀಕರಣ ಮತ್ತು ಲಾಭಬಡುಕತನದಿಂದ ಮುಕ್ತವಾಗಿರಲು ಸಾಧ್ಯವಾಯಿತು. ಅವರು ಋಷಿಗಳಿಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದರು. ಋಷಿಗಳ ತತ್ವ ಮತ್ತು ಮಾರ್ಗದರ್ಶನದಲ್ಲಿ ಮಾನಸ ಬೆಳೆಯಿತು. ಋಷಿಗಳಲ್ಲಿಟ್ಟ ಅಚಲ ಶ್ರದ್ಧೆಯಿಂದ, ಅವರು ಅಪೂರ್ವ ಆಧ್ಯಾತ್ಮಿಕ ಜ್ಞಾನ ಮತ್ತು ಚೈತನ್ಯಗಳನ್ನು ಅತ್ಯುನ್ನತ ಲೋಕಗಳಿಂದ ತರುವ ಮೂಲಕ ಈ ಮಾರ್ಗವನ್ನು ಸಶಕ್ತಗೊಳಿಸಿದರು, ಹಾಗೂ ಮಾನಸ ಫೌಂಡೇಶನ್‌ನ ಮೂಲಕ ಆಧ್ಯಾತ್ಮಿಕ ಬೋಧನೆಗಳನ್ನು ಮತ್ತು ಧ್ಯಾನದ ತಂತ್ರಗಳನ್ನು ಜಗತ್ತಿನಾದ್ಯಂತ ಯಾವುದೇ ಅನ್ವೇಷಕರಿಗೆ ದೊರಕುವಂತೆ ಮಾಡಿದರು.

ಮಾನಸದ ಮೂಲಭೂತ ತತ್ವವೆಂದರೆ ಅದರ ಪ್ರತಿ ಧ್ಯಾನಿಯು ಬೆಳೆದಷ್ಟು ಅದೂ ಬೆಳೆಯುತ್ತದೆ; ಅದರ ಬಲವಿರುವುದು ಅದರ ಸಾಧಕರ ಆಧ್ಯಾತ್ಮಿಕ ಅಭಿವೃದ್ಧಿಯಲ್ಲಿಯೇ ಹೊರತು ಅವರ ಸಂಖ್ಯಾಬಲದಲ್ಲಲ್ಲ. ಈ ಮಾರ್ಗವು ಹಿಂದೆಯೂ, ಎಂದೆಂದಿಗೂ ಪ್ರತಿಯೊಬ್ಬ ಸಾಧಕನಿಗೂ ವೈಯಕ್ತಿಕ ಮಾರ್ಗದರ್ಶನ ನೀಡುತ್ತಿತ್ತು ಹಾಗೂ ನೀಡುತ್ತಿರುತ್ತದೆ.

ಈ ಅದ್ವಿತೀಯ ಆಧ್ಯಾತ್ಮಿಕ ಮಾರ್ಗದ ಮೊದಲ ಇಪ್ಪತ್ತೈದು ಅದ್ಭುತ ವರ್ಷಗಳು ಅದರ ಬುನಾದಿ. ಗುರೂಜಿಯವರು ಈ ಮಾರ್ಗವನ್ನು ಸಾವಿರಾರು ವರ್ಷಗಳ ಕಾಲ ಮುಂದುವರಿಯಬೇಕೆಂಬ ಉದ್ದೇಶದಿಂದ ಸ್ಥಾಪಿಸಿದ್ದಾರೆ. ಮನುಕುಲವು ತನ್ನ ಅತ್ಯುನ್ನತ ಸಾಮರ್ಥ್ಯವನ್ನು ತಲುಪುವವರೆಗೆ ಬೇಕಾಗುವ ಮಾರ್ಗದರ್ಶನಕ್ಕಾಗಿ ಅನೇಕ ಅವ್ಯಕ್ತ ಅಧ್ಯಾತ್ಮ ಜ್ಞಾನ ಮತ್ತು ಚೈತನ್ಯಗಳನ್ನು ನಮ್ಮ ಧ್ಯಾನ ಮಂದಿರಗಳಲ್ಲಿ ಸಂಗ್ರಹಿಸಿಡಲಾಗಿದೆ.

ಗುರೂಜಿ ಮತ್ತು ಮಹಾನ್ ಋಷಿಗಳು ಮಾನಸ ಫೌಂಡೇಶನ್‌ನ ಮೂಲಕ ಸಾಧಕರನ್ನು ಸದಾಕಾಲ ಮಾರ್ಗದರ್ಶಿಸುತ್ತಲೇ ಇರುತ್ತಾರೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿ ಹೀಗೆ ಮಾತನಾಡಿದರು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

05–01–2003

ಹೊಸ ವರ್ಷದ ಮೊದಲ ತರಗತಿಯನ್ನು, ಈ ಜೀವನವನ್ನು ಸಂಪೂರ್ಣವಾಗಿ ಬದುಕುವ ಪ್ರಯತ್ನಗಳನ್ನು ಗಂಭೀರವಾಗಿ ಮಾಡುವಂಥ ಆಧ್ಯಾತ್ಮಿಕತೆಯ ಉದ್ದೇಶದ ದೃಢಸಂಕಲ್ಪದಿಂದ ಪ್ರಾರಂಭಿಸೋಣ. ಈ ಕಾರಣಕ್ಕಾಗಿಯೇ ನಾವು ದೇವರ ಬಳಿಯಿಂದ ಬಂದು, ಈ ಭೂಮಿ ಮೇಲೆ ಜನ್ಮ ತಳೆದಿದ್ದೇವೆ. ಈ ಭೂಮಿಯ ಮೇಲಿನ ಜೀವನವು ನಮಗೆ ಅತ್ಯಂತ ಶಾಂತಿಯುತವಾಗಿ ಬದುಕಲು, ಉನ್ನತ ವಾಸ್ತವೀಯತೆಗಳಿಗೆ ಜಾಗೃತಗೊಳ್ಳಲು ಅನೇಕ ಅವಕಾಶಗಳನ್ನು ಒದಗಿಸಿಕೊಡುತ್ತದೆ.

ನಾವು ಸಾಮಾನ್ಯವಾಗಿ ಉನ್ನತ ವಾಸ್ತವೀಯತೆಗಳಿಗೆ ಜಾಗೃತಗೊಳ್ಳುವುದರ ಬಗ್ಗೆ ಯೋಚಿಸುವುದಿಲ್ಲ. ನಾವು ನಮ್ಮ ಸುತ್ತ ಇರುವ ಪ್ರಪಂಚವನ್ನು ಇದೊಂದೇ ಪ್ರಪಂಚ ಎಂದು ಯೋಚಿಸುತ್ತೇವೆ. ಆದರೆ ಇನ್ನೂ ಅನೇಕ ಪ್ರಪಂಚಗಳಿವೆ. ಅವು ಪ್ರಜ್ಞೆಯ ಬೇರೆ ಬೇರೆ ಉನ್ನತ ಮಟ್ಟಗಳು. ಅತ್ಯುನ್ನತ ವಾಸ್ತವವು ಸ್ವತಃ ದೇವರೇ ಆಗಿದ್ದಾನೆ. ನಾವು ಇದಕ್ಕೆ ಜಾಗೃತಗೊಳ್ಳಬೇಕು. ನಮಗೆ ಇದರ ಅರಿವಿರದಿದ್ದರೆ, ನಾವು ಇತರ ಯಾವುದೇ ಪ್ರಾಣಿ ಅಥವಾ ಮರದಂತೆ ಬದುಕುತ್ತಿರುತ್ತೇವೆ. ನಮಗೆ ವ್ಯಕ್ತಪಡಿಸಲು ಮತ್ತು ಅನುಭವಿಸಲು ಸಾಕಷ್ಟು ಶಕ್ತಿಯಿದೆ.

ನಾವು ಅವಕಾಶಗಳನ್ನು ಉಪಯೋಗಿಸಿಕೊಳ್ಳದೇ ಹೋದರೆ, ನಾವು ಆಧ್ಯಾತ್ಮಿಕವಾಗಿ ಬೆಳೆಯುವುದಿಲ್ಲ ಮತ್ತು ಪೂರ್ಣವಾಗಿ ಬದುಕುವುದಿಲ್ಲ. ನಾವು ಸೂಕ್ತ ಆಯ್ಕೆಗಳನ್ನು ಮಾಡುವುದಿಲ್ಲ, ತಪ್ಪು ವಿಷಯಗಳು ಅದರಲ್ಲೂ ಲೌಕಿಕವಾದುದನ್ನು ಮಾತ್ರ ಬಿಡದೆ ಮುಂದುವರೆಸಿಕೊಂಡು, ಎಲ್ಲ ರೀತಿಯ ಬಂಧನಗಳನ್ನು ಬೆಳೆಸಿಕೊಳ್ಳುವುದರಿಂದ ನಾವು ಕಷ್ಟಪಡುತ್ತೇವೆ. ಬಂಧನದಲ್ಲಿ ಶಾಂತಿ ಇರುವುದಿಲ್ಲ. ನಾವು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಬಹಳ ಶ್ರಮಿಸಬೇಕು ಮತ್ತು ಅದು ಜಾಗೃತಿಯಿಂದ ಬರುತ್ತದೆ.

ಪೂರ್ಣವಾಗಿ ಜಾಗೃತಗೊಂಡ ಇಂತಹ ಜೀವನ ನಡೆಸುವುದರಿಂದ ಬಹಳ ಸಂತೋಷ ಮತ್ತು ಶಾಂತಿ ಯಾವಾಗಲೂ ಸಾಧ್ಯ. ಇದು ಶ್ರೀಮಂತಿಕೆ ಅಥವಾ ಬಡತನಕ್ಕೆ ಸಂಬಂಧ ಪಟ್ಟದ್ದಲ್ಲ. ಶಾಂತಿ ಮನಸ್ಸಿನ ಒಂದು ಸ್ಥಿತಿ. ಶಾಂತಿ ನಮ್ಮ ಇರುವಿಕೆಯ ರೀತಿ ಕೂಡಾ ಆಗಿದೆ. ಈ ಹೊಸ ವರ್ಷದಲ್ಲಿ ಇಂಥ ಸ್ಥಿತಿಯನ್ನು ತಲುಪಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡೋಣ.

ನಾವು ನಮ್ಮ ಧ್ಯಾನಗಳ ಗುಣಮಟ್ಟವನ್ನು ಉತ್ತಮ ಪಡಿಸಬೇಕು, ಪ್ರಪಂಚದೆಲ್ಲೆಡೆ ಅದರ ಕಂಪನಗಳನ್ನು ಹರಡಬೇಕು. ನಮಗೆ ಹಾಗೆ ಮಾಡಲು ಆಗುತ್ತಿಲ್ಲ ಏಕೆಂದರೆ ನಮ್ಮೊಳಗೆ ಆಗುತ್ತಿರುವ ಸಂಘರ್ಷಣೆಗಳನ್ನು ನಿಭಾಯಿಸಲು ನಾವು ಅಶಕ್ತರಾಗಿದ್ದೇವೆ. ನಾವು ನಮ್ಮ ಗಮನವನ್ನು ಕೇಂದ್ರೀಕರಿಸುತ್ತಿಲ್ಲ. ನಾವೆಲ್ಲ ಒಟ್ಟಾಗಿ ಜೊತೆಗೂಡಿದರೆ, ಈ ಇಡೀ ದೇಶದ ಭವಿಷ್ಯವನ್ನು ಬದಲಾಯಿಸಬಹುದು. ಅನೇಕ ವ್ಯಕ್ತಿಗಳು ಹೊಸಯುಗಕ್ಕಾಗಿ ಕೆಲಸಮಾಡುತ್ತಿದ್ದಾರೆ. ದುರಂತವೆಂದರೆ, ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡಬೇಕೆಂದು ಬಯಸುವುದು. ನಾನು ಯಾವಾಗಲೂ ಅಮರರವರ ಮಾತನ್ನು ಉಲ್ಲೇಖಿಸುತ್ತೇನೆ, ಅವರು ನನ್ನ ರಕ್ತದಲ್ಲಿದ್ದಾರೆ. "ಅಹಂ ಅನ್ನು ಬಿಟ್ಟರೆ ಮಾತ್ರ ಯಾವ ಕೆಲಸವನ್ನಾದರೂ ಮಾಡಬಹುದು" ಎಂದು ಅವರು ಹೇಳಿದರು. ನಾವು ಒಂದಾಗಲು ಪ್ರಯತ್ನಿಸೋಣ ಮತ್ತು ಏಕತೆಗಾಗಿ ದುಡಿಯೋಣ. ಈ ಸಂಪರ್ಕಜಾಲವನ್ನು ನಾವು ಕಟ್ಟಬಲ್ಲವರಾದರೆ ಮಾನವಕುಲ ಮುನ್ನಡೆಯುತ್ತದೆ.

ಯಾರಾದರೊಬ್ಬರು ಹಣತೆಯನ್ನು ಹಚ್ಚಬೇಕು; ಅದು ವ್ಯರ್ಥವಾಗುವುದಿಲ್ಲ, ಏಕೆಂದರೆ ಅದು ಮಾನವ ಚೇತನ. ಮುಂದಿನ ಜನಾಂಗ ಯಾವುದೇ ರೀತಿಯ ಸಂಘರ್ಷಗಳನ್ನು ನೋಡುವುದಿಲ್ಲ ಮತ್ತು ಅಲ್ಲಿ ಬಡತನವಿರುವುದಿಲ್ಲ. ಜನರು ಇದನ್ನು ಮಾಡಿರದಿದ್ದರೆ, ಈ ನಾಗರೀಕತೆ ಬೆಳೆಯುತ್ತಿರಲಿಲ್ಲ. ನಾವು ಪ್ರಶಸ್ತಿಪತ್ರಗಳ ಬಗ್ಗೆ ಯೋಚಿಸಬೇಕಾಗಿಲ್ಲ. ನಾವೆಲ್ಲ ಹಣತೆಗಳನ್ನು ಬೆಳಗೋಣ.

12–01–2003

ಶರಣಾಗತಿ ಎಂದರೆ ದೇವರೊಂದಿಗೆ ಸಂಪರ್ಕ ಹೊಂದಿರುವುದು; ಅಂತರ್‌ಗ್ರಹಣ ಶಕ್ತಿಯ ಮೂಲಕ ನಮ್ಮ ಪ್ರತಿಯೊಂದು ಪ್ರಕ್ರಿಯೆ ದೇವರಿಂದ ಮಾರ್ಗದರ್ಶಿತವಾಗಿರುತ್ತದೆ ಮತ್ತು ಅತ್ಯಂತ ಮುಖ್ಯವಾಗಿ ಪ್ರತಿಯೊಂದು ಫಲಿತಾಂಶವನ್ನು ದೇವರ ಕೊಡುಗೆ ಎಂದು ನಾವು ಒಪ್ಪಿಕೊಳ್ಳಬೇಕು. ಇದು ಸಂಪೂರ್ಣ ಶರಣಾಗತಿ. ಆಗ ನಾವು ಪ್ರಶ್ನಿಸುವುದಿಲ್ಲ, ಗೊಣಗುವುದಿಲ್ಲ ಅಥವಾ ದೂರುವುದಿಲ್ಲ. ಕೆಲವು ಸಲ ಫಲಿತಾಂಶಗಳು ನಮಗೆ ಹಿತವಾಗಿರುವುದಿಲ್ಲ; ಆದರೂ ಅವುಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ಇದು ಒಂದು ಹಂತ. ಇನ್ನೊಂದು ಹಂತವಿದೆ. ನಾವು ಅತ್ಯುನ್ನತ ನೆಲೆಯಿಂದ ಕೆಳಗಿಳಿದು ಬಂದಿದ್ದೇವೆ ಮತ್ತು ದಾರಿಯಲ್ಲಿ ನಾವು ಬುದ್ಧಿಶಕ್ತಿ ಮತ್ತು ಮನಸ್ಸನ್ನು ಸಂಗ್ರಹಿಸಿದ್ದೇವೆ. ನಾವು ಹಿಂದಕ್ಕೆ ಹೋಗಿ ನಮ್ಮ ಮನೆ ಅಥವಾ ದೇವರನ್ನು ತಲುಪಬೇಕಾದರೆ ನಾವು ಇವುಗಳನ್ನು ಬಿಡಬೇಕು. ಅಂತಿಮವಾಗಿ ನಾವು ಆತ್ಮಗಳ ರೂಪದಲ್ಲಿ ಬದುಕುವ ನಮ್ಮ ಆಧ್ಯಾತ್ಮಿಕ ದೇಹವನ್ನು ಕೂಡಾ ತ್ಯಜಿಸಿ ಶರಣಾಗಬೇಕು. ಇದು ಸಂಪೂರ್ಣ ಶರಣಾಗತಿ.

ನಾವು ಧ್ಯಾನ ಮಾಡಿದಾಗ, ಮನಸ್ಸು ಮತ್ತು ಬುದ್ಧಿಶಕ್ತಿ ನಿಶ್ಶಬ್ದವಾಗುತ್ತವೆ. ನಾವು ಈ ಹಂತಗಳಿಂದ ನಮ್ಮ ಜಾಗೃತಿಯನ್ನು ಬದಲಾಯಿಸುತ್ತೇವೆ. ಇದು ಒಂದು ರೀತಿಯ ಶರಣಾಗತಿ. ಶರಣಾಗತಿಯಲ್ಲಿ ಸಂಪೂರ್ಣ ವಿಸ್ತಾರವಿರುತ್ತದೆ ಮತ್ತು ನಾವು ದೇವರೇ ಆಗುತ್ತೇವೆ. ಸಂಪೂರ್ಣ ಶರಣಾಗತಿ ಯೋಗವೆನಿಸುತ್ತದೆ, ಅದು ದೇವರ ಮತ್ತು ನನ್ನ ವಿಲೀನದಿಂದ ಆಗುವುದು; ವ್ಯಕ್ತಿಯ ಆತ್ಮ ಮತ್ತು ಪರಮಾತ್ಮನ ಸೇರುವಿಕೆಯೇ ಯೋಗ.

ನಮ್ಮ ವೈಯಕ್ತಿಕ ಆಧ್ಯಾತ್ಮಿಕ ಪ್ರಯಾಣಕ್ಕೆ ಮತ್ತು ಈ ಭೂಮಿ ಹೊಸ ಪ್ರಜ್ಞೆಗೆ ಪ್ರವೇಶ ಮಾಡುವುದಕ್ಕೆ ಪ್ರೀತಿಯನ್ನು ವ್ಯಕ್ತಪಡಿಸುವುದು ಬಹಳ ಮುಖ್ಯ. ನಮ್ಮೊಳಗೆ ಹಿಂಸೆಯಿದ್ದು, ನಮ್ಮ ಸುತ್ತ ಅ–ಪ್ರೇಮವಿದ್ದರೆ ನಾವು ಹೊಸ ಪ್ರಜ್ಞೆಯೊಳಗೆ ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ನಮ್ಮಿಂದ ನಕಾರಾತ್ಮಕ ಭಾವೋದ್ವೇಗಗಳನ್ನು ಮತ್ತು ಆಲೋಚನೆಗಳನ್ನು ತೊಡೆದು ಹಾಕಲು ನಮ್ಮ ಇಡೀ ವ್ಯವಸ್ಥೆಯನ್ನು ನಾವು ಸಚೇತನಗೊಳಿಸಬೇಕು.

ನಮ್ಮೊಳಗಿರುವ ನಕಾರಾತ್ಮಕತೆಗಳನ್ನು ಹೊರದೂಡಲು ದೇಹ, ಮನಸ್ಸು ಮತ್ತು ಬುದ್ಧಿಶಕ್ತಿಗಳನ್ನು ಒಂದುಗೂಡಿಸುವ ಶಂಬಲದ ನಿಯಮವನ್ನು ಪುಲಸ್ತ್ಯ ಮಹರ್ಷಿಗಳು ಕೊಟ್ಟಿದ್ದಾರೆ. ಧ್ಯಾನದಲ್ಲಿ ಸಂಯೋಗ ಸಂಭವಿಸುತ್ತದೆ. ಆದ್ದರಿಂದ ಹೆಚ್ಚು ಧ್ಯಾನ ಮಾಡಿ. ನಾವು ಧ್ಯಾನ ಮಾಡಿದಾಗ ತನ್ನಷ್ಟಕ್ಕೆ ತಾನೇ ನಾವು ಚಾನಲ್‌ಗಳಾಗಿ ಬಿಡುತ್ತೇವೆ. ಚೈತನ್ಯಗಳು ನಮ್ಮೊಳಗೆ ಪ್ರವೇಶಿಸಿ ನಮ್ಮ ಮೂಲಕ ಹರಿಯುತ್ತವೆ.

ನಾವು ಸೂಕ್ಷ್ಮ ಜೀವಿಗಳು ಮತ್ತು ಉನ್ನತ ಪ್ರಪಂಚಗಳೊಡನೆ ಸಂಪರ್ಕವನ್ನು ಅನುಭವಿಸಬೇಕು, ಏಕೆಂದರೆ ಅವು ನಮ್ಮ ಜೀವನದ ಭಾಗ. ಸೂಕ್ಷ್ಮಮಟ್ಟದಲ್ಲಿ 72 ಗಂಟೆಗಳ ಮೊದಲೇ ಘಟನೆಗಳು ಸಂಭವಿಸುತ್ತವೆ. ಅವುಗಳು 72 ಘಂಟೆಗಳ ಮೊದಲೇ ನಮಗೆ ತಿಳಿದಿದ್ದರೆ, ನಾವು ನಮ್ಮ ತಪ್ಪು ಆಯ್ಕೆಗಳನ್ನು ಬದಲಿಸಿ, ವಿವೇಕದಿಂದ ಸೂಕ್ತವಾದುದನ್ನು ಆರಿಸಿಕೊಳ್ಳಬಹುದು. ನಾವು ಸೂಕ್ಷ್ಮ ಪ್ರಪಂಚಗಳಲ್ಲಿ ಪ್ರಯಾಣಿಸಿದರೆ 72 ಘಂಟೆಗಳ ಮೊದಲೇ ವಿಷಯಗಳನ್ನು ತಿಳಿಯಬಹುದು ಮಾತ್ರವಲ್ಲ ಬಹುಶಃ 72 ವರ್ಷಗಳ ಹಿಂದಿನದನ್ನು ತಿಳಿಯಬಹುದು. ನಾವು ಸೂಕ್ಷ್ಮ ಪ್ರಪಂಚಗಳಿಗೆ ಪ್ರವೇಶ ಮಾಡಬಲ್ಲವರಾದರೆ ಈ ಜೀವನವನ್ನು ಹೆಚ್ಚು ಶಾಂತಿಯಿಂದ ಬದುಕಬಹುದು. ಆ ಕಾರಣದಿಂದಲೇ ಸೂಕ್ಷ್ಮ ಪ್ರಪಂಚವನ್ನು ಅರಿಯುವುದು ಬಹಳ ಮುಖ್ಯ. ಋಷಿಗಳೊಡನೆ ಸಂಪರ್ಕ ಸಾಧಿಸುವುದು ಅಷ್ಟು ಮುಖ್ಯ. ಅವರು ಅತ್ಯಂತ ಹೆಚ್ಚಿನ ವಿವೇಕ ಉಳ್ಳವರು ಮತ್ತು ಶಕ್ತಿಶಾಲಿಗಳು. ಅವರು ನಮ್ಮ ಜೀವನವನ್ನು ಮಾರ್ಗದರ್ಶಿಸುತ್ತಾರೆ.

26–01–2003

ಈ ಭೂಮಿಯ ಮೇಲೆ ಅಗಾಧವಾದ ಆಧ್ಯಾತ್ಮಿಕ ಜ್ಞಾನ ಲಭ್ಯವಿದೆ. ಇದು ಸಾವಿರಾರು ವರ್ಷಗಳಿಂದ ಸಂಗ್ರಹಿತವಾದುದು. ಈ ಜ್ಞಾನ ಋಷಿಗಳಿಂದ ಬಂದುದು ಮತ್ತು ಅವುಗಳನ್ನು ನೇರವಾಗಿ ಪ್ರಜ್ಞೆಯ ಉನ್ನತ ಪದರಗಳಿಂದ ಚೈತನ್ಯಗಳ ರೂಪದಲ್ಲಿ ಸಂಗ್ರಹಿಸಲಾಗಿದೆ. ಋಷಿಗಳು ಈ ಚೈತನ್ಯಗಳನ್ನು

## ಗುರೂಜಿ ಹೀಗೆ ಮಾತನಾಡಿದರು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

ಅಲೋಚನೆಗಳನ್ನಾಗಿ ಪರಿವರ್ತಿಸಿ ಜನಗಳಿಗೆ ರವಾನಿಸಿದರು. ನಾವು ದೇವರನ್ನು ಅನುಭವಿಸಬಲ್ಲವರಾಗಿದ್ದೆವು, ಅತ್ಯುನ್ನತ ಸತ್ಯವನ್ನು ಅನುಭವಿಸಬಲ್ಲವರಾಗಿದ್ದೆವು, ಆಗ ಅಂತಹ ಶಕ್ತಿಯಿತ್ತು. ಕಾಲಾನುಕ್ರಮದಲ್ಲಿ ಈ ಜ್ಞಾನವನ್ನು ಮುಂದಿನ ಜನಾಂಗಕ್ಕೆ ರವಾನಿಸಲಾಗಿತ್ತು. ಅದು ಹೇಗೋ ಸ್ವಾಭಾವಿಕವಾಗಿ ವಿಕೃತಗೊಂಡಿತು .

ಅಮರರು ಹೇಳಿದರು ಕಲಿಯುಗದಲ್ಲಿ ಜನರು ದೈಹಿಕವಾಗಿ, ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ಶಕ್ತಿಯಿಂದ ಕುಬ್ಜರಾಗುತ್ತಾರೆ. ನಾವು ಅನೇಕ ಸೌಲಭ್ಯಗಳನ್ನು ಉನ್ನತ ಸೌಲಭ್ಯಗಳನ್ನು ಕಳೆದುಕೊಂಡೆವು. ನಾವು ಜ್ಞಾನವನ್ನು ಗ್ರಹಿಸಲಾರದೆ, ಪಡೆದುಕೊಳ್ಳಲಾರದೇ ಹೋದೆವು. ಹೀಗೆ ಅಗಾಧ ಜ್ಞಾನ ಕಳೆದುಹೋಯಿತು. ಜನರು ಅತ್ಯುನ್ನತ ಸತ್ಯಗಳನ್ನು ಪಡೆಯಲಾಗದೆ ಅವರು ತಮ್ಮದೇ ಆದ ಆಲೋಚನೆಗಳನ್ನು ಮತ್ತು ವಿಷಯಗಳನ್ನು ಸೇರಿಸಿ ವಿವರಿಸಿದರು. ಅವರು ಒಂದು ರೀತಿಯ ಆಚರಣೆಗೆ ಮಹತ್ವ ಕೊಟ್ಟರು.

ಆಚರಣೆಗಳು, ಅಭ್ಯಾಸಗಳು ಮತ್ತು ಅನೇಕ ಹೊಸ ನಿಶ್ಚಿತ ಅಭಿಪ್ರಾಯಗಳ ಮೂಲಕ ಕೈಗೊಂಡ ಆಧ್ಯಾತ್ಮಿಕ ಪ್ರಯಾಣ ನಮ್ಮನ್ನು ಗೊಂದಲಕ್ಕೆ ಗುರಿಮಾಡಿತು. ಇದರಿಂದ ಅಪಾರ ಜ್ಞಾನ ಕಳೆದುಹೋಯಿತು, ಹೆಚ್ಚಿನ ಅಸಂಬಂಧ ಜ್ಞಾನ ಸೇರಿಸಲಾಯಿತು. ಯಾರಾದರೂ ಆಧ್ಯಾತ್ಮಿಕ ಪ್ರಯಾಣ ಮಾಡಬಯಸಿದರೆ ಅವರು ಬಹಳಷ್ಟು ಸಂಬಂಧವಿಲ್ಲದ ಜ್ಞಾನವನ್ನು ಅಭ್ಯಾಸ ಮಾಡಬೇಕಿತ್ತು. ಇದರಿಂದ ಆಧ್ಯಾತ್ಮಿಕ ಸಾರ ಕಳೆದುಹೋಯಿತು.

ಯಾರು ಸಿದ್ಧತೆಮಾಡಿಕೊಳ್ಳುತ್ತಿದ್ದಾರೆಯೋ ಅವರಿಗೆ ಮಾರ್ಗದರ್ಶನ ಮಾಡಲು ಮತ್ತು ಈ ಗೊಂದಲವನ್ನು ಪರಿಹರಿಸುವ ಕಾಲ ಬಂದಿದೆ. ಪ್ರಪಂಚದ ಎಲ್ಲ ಕಡೆ ಜನರು ಎಚ್ಚೆತ್ತುಕೊಳ್ಳುತ್ತಿದ್ದಾರೆ. ನಾವು ಹೊಸಯುಗವನ್ನು ಪ್ರವೇಶಿಸುತ್ತಿದ್ದೇವೆ, ಈ ಭೂಮಿ ಅದ್ಭುತ ಚೈತನ್ಯಗಳು, ಹೊಸ ಚೈತನ್ಯಗಳಿಂದ ತುಂಬಿ ಹೋಗಿದೆ. ಈ ಚೈತನ್ಯಗಳು ನಮ್ಮನ್ನು ಜಾಗೃತಗೊಳಿಸುತ್ತವೆ. ಅವು ಕೆಲವು ಕರ್ಮಗಳನ್ನು ನಿವಾರಣೆ ಮಾಡುತ್ತವೆ, ಮೆದುಳಿನ ಹೊಸ ಜೀವಕೋಶಗಳನ್ನು ತೆರೆಯುತ್ತವೆ. ತಕ್ಷಣವೇ ನಾವು ಇದು ಸೂಕ್ತ ವಿಧಾನವೆಂಬುದನ್ನು ಮನಗಾಣುತ್ತೇವೆ ಮತ್ತು ನಾವು ನಮ್ಮ ಅಂತರ್‌ಗ್ರಹಣ ದೃಷ್ಟಿಯಿಂದ ಅರಿಯುತ್ತೇವೆ. ಈ ಜ್ಞಾನವನ್ನು ಅರಿಯಲು ಜನರು ಸಿದ್ಧರಾಗುತ್ತಿದ್ದಾರೆ. ಅವರು ಉನ್ನತ ಪ್ರಪಂಚದೊಡನೆ ಸಂಪರ್ಕ ಸ್ಥಾಪಿಸಲು ತಮ್ಮನ್ನು ತಾವು ತೆರೆದುಕೊಳ್ಳುತ್ತಿದ್ದಾರೆ, ಬೆಳೆಯುತ್ತಿದ್ದಾರೆ.

ಈ ಸಮಯದಲ್ಲಿ ಋಷಿಗಳ ಕಾರ್ಯ ಬಹಳ ಮುಖ್ಯ ಮತ್ತು ಮೌಲ್ಯ ಉಳ್ಳದ್ದು, ಏಕೆಂದರೆ ನಾವು ಸತ್ಯಯುಗದೆಡೆಗೆ ಚಲಿಸುತ್ತಿದ್ದೇವೆ. ನಾನಾ ವಿಧಧ ತಂತ್ರಗಳನ್ನು ಅಭ್ಯಾಸ ಮಾಡುವುದರಿಂದ, ದೇವರನ್ನು ಅನುಭವಿಸುವುದರಿಂದ ಸತ್ಯಯುಗಕ್ಕೆ ನಾವು ಎಚ್ಚರಗೊಳ್ಳಬೇಕು. ಇಲ್ಲಿ ನಾನು ಹೇಳಬಯಸುವುದೇನೆಂದರೆ, ಈ ಮಾರ್ಗದಲ್ಲಿ ಯಾವುದನ್ನೂ ಬಲವಂತವಾಗಿ ಹೇರುವುದಿಲ್ಲ. ನನ್ನ ಗುರುವಿನಿಂದ ಕಲಿತ ಸತ್ಯವನ್ನು ನಿಮ್ಮ ಮುಂದೆ ಇಡಬಯಸುತ್ತೇನೆ. ನಾನು ಯಾವಾಗಲೂ ಹೇಳುತ್ತೇನೆ: "ನಿಮ್ಮ ಅಂತರ್‌ಗ್ರಹಣ ಶಕ್ತಿಯಂತೆ ನಡೆಯಿರಿ." ನೀವು ಆರಿಸಿಕೊಂಡರೆ, ನೀವು ಒಪ್ಪಿಕೊಂಡರೆ ನೀವು ಉನ್ನತ ಸತ್ಯಗಳನ್ನು ಅನುಭವಿಸುವಿರಿ. ಆಗ ನಮ್ಮಲ್ಲಿ ಪ್ರತಿಯೊಬ್ಬರೂ ಒಂದೊಂದು ಚಾನಲ್ ಆಗುತ್ತಾರೆ. ಪ್ರತಿಯೊಬ್ಬರೂ ಬೆಳಕಾಗುತ್ತಾರೆ ಮತ್ತು ಇತರರಿಗೆ ಬೆಳಕನ್ನು ಹರಡಬಲ್ಲವರಾಗುತ್ತಾರೆ. ನಾವು ಧ್ಯಾನ ಕೇಂದ್ರಗಳನ್ನು ತೆರೆಯಬೇಕಾಗಿಲ್ಲ ಅಥವಾ ಏನನ್ನೂ ಮಾಡಬೇಕಿಲ್ಲ. ನಮ್ಮದೇ ಆದ ರೀತಿಯಲ್ಲಿ ನಾವು ಬದುಕಬೇಕು, ನಿರ್ಮಲವಾದ ಜೀವನ ಬದುಕಬೇಕು. ಆಗ ನಾವು ಸತ್ಯಯುಗದ ಕಂಪನಗಳನ್ನು ಹೊರಸೂಸುತ್ತೇವೆ. ಅಪಾರ ಜ್ಞಾನ ಒಳಗೊಂಡಿರುವ ಈ ಚೈತನ್ಯಗಳಿಗೆ ನಾವು ಚಾನಲ್‌ಗಳಾಗುತ್ತೇವೆ. ಹೀಗೆ ಪ್ರತಿಯೊಬ್ಬ ಧ್ಯಾನಿ ತನಗರಿವಿಲ್ಲದೆಯೇ ಒಬ್ಬ ಬೆಳಕಿನ ಕಾರ್ಯಕರ್ತನಾಗುತ್ತಾನೆ.

02–02–2003

ಇಲ್ಲಿರುವ ಪ್ರತಿಯೊಬ್ಬರಿಗೂ ನಾನು ಧನ್ಯವಾದ ಹೇಳಬಯಸುತ್ತೇನೆ, ಏಕೆಂದರೆ ನನ್ನ ಗುರುವಿನ ಜನ್ಮ ದಿನವಾದ ಈ ದಿನ ನಿಮ್ಮ ಜೊತೆ ವಿಷಯಗಳನ್ನು ಹಂಚಿಕೊಳ್ಳಲು ನನಗೆ ಬಹಳ ಸಂತೋಷವೆನಿಸುತ್ತದೆ. ನಾವು ಚೈತನ್ಯಗಳನ್ನು ಮತ್ತು ಮಾಸ್ಟರ್‌ಗಳ ಕೃಪೆಗಳನ್ನು ಹಂಚಿಕೊಳ್ಳುತ್ತೇವೆ. ನಾವು ಅಮರರವರ ಬಗ್ಗೆ ಏನು ಮಾತನಾಡಿದರೂ ಒಂದು ರೀತಿಯ ಉತ್ಪ್ರೇಕ್ಷೆಯಂತೆ ತೋರಬಹುದು, ಆದರೆ ನೀವು ನನ್ನ ಮಾತನ್ನು ನಂಬಿ, ವಾಸ್ತವವಾಗಿ ನಾವು ವಿಷಯಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದೇವೆ.

ನಾವು ಅತ್ಯಂತ ಸವಾಲಿನ ಪ್ರಳಯದ ಕಾಲಾವಧಿಯಲ್ಲಿದ್ದೇವೆ. ಅಮರರವರು ಮತ್ತು ಅವರ ಕಾರ್ಯವನ್ನು ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ, ನಾವು ಕೆಲಮಟ್ಟಿಗೆ ಅರ್ಥಮಾಡಿಕೊಂಡಿರಬಹುದು ಆದರೆ ಅದರ ಹರಹು ಮತ್ತು ವಿಸ್ತಾರವನ್ನಲ್ಲ. ಇಲ್ಲಿ ಒಂದು ಪ್ರೀತಿಯ ನಗರವನ್ನು ಕಟ್ಟಬೇಕೆಂದು ಅವರ ಕನಸಾಗಿತ್ತು. ಆಳವಾದ ಧ್ಯಾನದಲ್ಲಿ ಬೆಳಕನ್ನು ಅನುಭವಿಸಿದಾಗ ಮಾತ್ರ ಈ ಪ್ರೀತಿಯನ್ನು ಅರಿಯಬಹುದು. ಈ ಅದ್ಭುತ ಯೋಜನೆಯ ಭಾಗವಾಗಿರುವ ಪ್ರತಿಯೊಬ್ಬರೂ ಅದನ್ನು ಅನುಭವಿಸಬೇಕು. ಆಗ ಮಾತ್ರ ಅಮರರಿಗಾಗಿ ಕೆಲಸ ಮಾಡುವ ಬಗ್ಗೆ ಯೋಚಿಸಬಹುದು ಮತ್ತು ಅವರ ಕನಸಿನ ಈ ಯೋಜನೆಯ ಕಾರ್ಯರೂಪದಲ್ಲಿ ಭಾಗವಹಿಸಬಹುದು.

ಅವರು ನಮಗೆ ಅಪಾರ ಜ್ಞಾನ ನೀಡಿದರು. ಅವುಗಳಲ್ಲಿ ಕೆಲವು ಬಹಳ ಅಪರೂಪ. ಅಸಂಖ್ಯಾತ ಬಾಗಿಲುಗಳಿಗೆ ಕೀಲಿಕೈನಂತಿರುವ ಧ್ಯಾನವನ್ನು ಕಲಿಸಿದರು. ಅವರು ನಮಗೆ ಹೇಳಿದರು, "ಇಲ್ಲಿನ ಜೀವನ ಮಾತ್ರ ಜೀವನವಲ್ಲ, ನಾವು ಸೂಕ್ಷ್ಮ ನೆಲೆಯಲ್ಲಿ, ಇನ್ನೂ ಉನ್ನತ ನೆಲೆಗಳಾದ ಕಾರಣಾತ್ಮಕ ನೆಲೆ ಮತ್ತು ನಾವಿರುವ ನೆಲೆ ಇವುಗಳಲ್ಲಿ ಏಕಕಾಲಕ್ಕೆ ಅಸ್ತಿತ್ವದಲ್ಲಿರುತ್ತೇವೆ. ಅಮರರವರ ಅತ್ಯಂತ ಮತ್ತು ಬಹಳ ಮುಖ್ಯ ಕೊಡುಗೆ ಎಂದರೆ ಅವರು ನಮಗೆ ಋಷಿಗಳನ್ನು ಪರಿಚಯ ಮಾಡಿದುದು. ಋಷಿಗಳು ಇನ್ನೊಂದು ನೆಲೆಯಲ್ಲಿ ಅಸ್ತಿತ್ವದಲ್ಲಿದ್ದಾರೆ ಎಂಬುದನ್ನು ಅವರು ಸ್ಪಷ್ಟವಾಗಿ ಸ್ಥಿರಪಡಿಸಿದ್ದಾರೆ. ಋಷಿಗಳು ಈ ಭೂಮಿಯ ಮೇಲೆ ನಮ್ಮ ಜೀವನದ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ನಮಗೆ ಇವೆಲ್ಲ ತಿಳಿದಿರಲಿಲ್ಲ. ಅವರು ಆಧ್ಯಾತ್ಮಿಕವಾಗಿ ಮಾರ್ಗದರ್ಶನ ಮಾಡಲು ಕಾಯುತ್ತಿದ್ದಾರೆ. ಯಾರು ಬೇಕಾದರೂ ತೀವ್ರ ಪ್ರಯತ್ನ ಮತ್ತು ನಿರ್ಮಲ ಪ್ರೀತಿಯಿಂದ ಅವರನ್ನು ಸಂಪರ್ಕಿಸಬಹುದು ಎಂಬುದು ನಮಗೆ ತಿಳಿದಿರಲಿಲ್ಲ. ಋಷಿಗಳು ಈಗ ನಮ್ಮ ಜೀವನದ ಒಂದು ಭಾಗವಾಗಿದ್ದಾರೆ.

ಅಮರರವರು ಸಂಕ್ಷಿಪ್ತ ರೂಪದಲ್ಲಿ ಸೃಷ್ಟಿ, ಆತ್ಮದ ಅವರೋಹಣ ಮತ್ತು ಆರೋಹಣಗಳ ಬಗ್ಗೆ ಜ್ಞಾನವನ್ನು ನೀಡಿದ್ದಾರೆ. ಇದನ್ನು 'ಆತ್ಮದ ಅವರೋಹಣ' ಪುಸ್ತಕದಲ್ಲಿ ತಿಳಿಸಲಾಗಿದೆ. ಈ ಪುಸ್ತಕವನ್ನು ಓದಿದಂತೆ ಅನೇಕ ವಿಷಯಗಳನ್ನು ಅರಿಯುತ್ತೇವೆ.

ಪುರುಷರು ಮತ್ತು ಸ್ತ್ರೀಯರಿಗೆ ಆಧ್ಯಾತ್ಮಿಕ ಅಭ್ಯಾಸಗಳಿಗೆ ಸಮಾನ ಅವಕಾಶಗಳಿವೆ ಎಂದು ಅಮರರು ಹೇಳಿದ್ದಾರೆ. 'ನಾವೆಲ್ಲರೂ ಸಮಾನರು' ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. ಧ್ಯಾನ, ಪೂಜೆಯ ಅತ್ಯುನ್ನತ ರೂಪ ಎಂದು ಹೇಳಿದವರೆಂದರೆ ಅಮರರವರು. ಪೂಜೆ ಎನ್ನುವುದು ನಮ್ಮ ಪ್ರೀತಿ ಮತ್ತು ಗೌರವದ ಅಭಿವ್ಯಕ್ತಿ. ಅವರು ಉನ್ನತ ರೀತಿಯ ಪೂಜೆಯಾದಂಥ, ಚೈತನ್ಯಗಳನ್ನು ಸಂಗ್ರಹಿಸಿ ದೇವರಿಗೆ ಅರ್ಪಿಸುವುದನ್ನು, ನಮಗೆ ಕಲಿಸಿದರು. ಪೂಜೆ ಮುಖ್ಯ, ಆದರೆ ಚೈತನ್ಯಗಳನ್ನು ಅರ್ಪಿಸುವುದು ಅತ್ಯುತ್ತಮ ಮಾರ್ಗವೆಂದು ಅವರು ಹೇಳಿದರು.

ಸಾಧನೆಯ ಅತ್ಯುನ್ನತ ಮತ್ತು ಅತ್ಯಂತ ಮುಖ್ಯ ಭಾಗ ಪ್ರೀತಿಯನ್ನು ವ್ಯಕ್ತಪಡಿಸುವುದು ಎಂದು ಅವರು ಹೇಳಿದರು. ಇದರಿಂದ ನಾವು ದೊಡ್ಡ ಮುನ್ನಡೆ ಸಾಧಿಸಬಹುದು, ನಮ್ಮ ಇಡೀ ಜೀವನವನ್ನು ಬದಲಿಸಬಹುದು, ಆದರೆ ನಾವು ಇವುಗಳ ಬಗ್ಗೆ ನಿರ್ಧರಿಸಬೇಕು. ಚೈತನ್ಯಗಳು, ಜ್ಞಾನ ಮತ್ತು ತಂತ್ರಗಳು ನಮಗೆ ಉಪಲಬ್ಧವಿದ್ದು ಇವು ನಮ್ಮನ್ನು ಉತ್ತಮ ಮತ್ತು ವಿಭಿನ್ನ ಮಾನವ ಜೀವಿಗಳನ್ನಾಗಿ ಮಾಡುತ್ತವೆ. ಆದ್ದರಿಂದ ನಾವು ಬದಲಾಗೋಣ. ನಾವು ಬದಲಾಗುವುದರಿಂದ, ಅಮರರವರಿಗೆ ನಾವು ಧನ್ಯತೆಯನ್ನು ಅರ್ಪಿಸಿದಂತಾಗುತ್ತದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಶುಲ್ಕದಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಅಮರ – ಓರ್ವ ಸರ್ವೋತ್ತಮ ಮಾರ್ಗದರ್ಶಿ

**ಜಯಾ ಬಿ; ಅನು: ಸುಧಾಕರ್**

ಶ್ರೀಕೃಷ್ಣನನ್ನು ಕುರಿತು ಮಾತನಾಡುವವರೆಲ್ಲರೂ ಅವನನ್ನು 'ಪೂರ್ಣಾವತಾರ' ಎಂದು ಸಂಬೋಧಿಸುತ್ತಾರೆ. ಅದೇ ರೀತಿ ಅಮರರವರನ್ನು ನಾವು ಯಾವುದೇ ಹಿಂಜರಿಕೆಯಿಲ್ಲದೆ 'ಪೂರ್ಣಪುರುಷ' ಎನ್ನಬಹುದು. ಒಬ್ಬ ಪರಿಪೂರ್ಣ ಮಾಸ್ಟರ್ ಮತ್ತು ಆಧ್ಯಾತ್ಮಿಕ ಮಾರ್ಗದರ್ಶಿಯಾದ ಅವರ ಹೋಲಿಸಲಸದಳವಾದ, ಆದರ್ಶಪ್ರಾಯ ಗುಣಗಳನ್ನು ಎಷ್ಟುಬಾರಿ ಎತ್ತಿತೋರಿಸುತ್ತಿದ್ದರೂ ಗುರೂಜಿಯವರಿಗೆ ಸಾಕೆನಿಸುತ್ತಿರಲಿಲ್ಲ. ಒಬ್ಬ ಮಾನವನಾಗಿ ಆಗಲಿ ಅಥವಾ ಒಬ್ಬ ಜ್ಞಾನೋದಯ ಹೊಂದಿದ ಮಾಸ್ಟರ್ ಆಗಿಯಾಗಲಿ ಅವರಿಗೆ ಯಾರನ್ನೂ ಹೋಲಿಸಲಾಗದು. ಮನುಷ್ಯತ್ವದ ಮತ್ತು ಆಧ್ಯಾತ್ಮಿಕ ಗುಣಗಳ ಅತ್ಯುನ್ನತ ಸತ್ಯಗಳನ್ನು ಅಕ್ಷರಶಃ ಜೀವಿಸುವುದರ ಮುಖಾಂತರ ಅವರು ಇಡೀ ಪ್ರಪಂಚಕ್ಕೆ ಒಂದು ನಿದರ್ಶನವಾದರು.

ದೈವತ್ವದೊಂದಿಗೆ ಬೆಸೆದುಕೊಂಡಿದ್ದ ಅವರ ಜೀವನ ಒಂದು ಮೌನ ಪ್ರಯಾಣ. ಅವರು ಸತ್ಯವನ್ನರಸುವುದಕ್ಕಾಗಿ ಕಾವಿಯನ್ನು ಧರಿಸಲಿಲ್ಲ ಅಥವಾ ಹಿಮಾಲಯಕ್ಕೆ ಹೋಗಲಿಲ್ಲ. ಬೇರೆ ಯಾವುದೇ ಸಾಮಾನ್ಯ ಮನುಷ್ಯನ ಹಾಗೆ ಸಂಸಾರದ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುತ್ತಾ ಹಾಗೂ ಜೀವನದ ಸಾಧಾರಣ ಸುಖ–ಸಂತೋಷಗಳಾದ ಸಂಗೀತವನ್ನು ಆಲಿಸುವುದು, ಚಲನಚಿತ್ರವನ್ನು ನೋಡುವುದು, ಕ್ರಿಕೆಟ್ ಪಂದ್ಯವನ್ನು ನೋಡುವುದು ಇತ್ಯಾದಿಗಳನ್ನು ಆನಂದಿಸುತ್ತಾ, ಜೀವನದ ಎಲ್ಲ ಅನುಭವಗಳನ್ನು ಅವರು ಅನುಭವಿಸಿದರು. ಹಾಗಿದ್ದರೂ, ಅವರನ್ನು ನಮಗಿಂತ ಭಿನ್ನರನ್ನಾಗಿಸಿರುವುದು ಯಾವುದು? ಅದು ದೇವರು ಮತ್ತು ಋಷಿಗಳ ಮೇಲಿನ ಅವರ ದೃಢ ನಂಬಿಕೆ ಮತ್ತು ಸಂಪೂರ್ಣ ಶರಣಾಗತಿ. ಅದು ಅವರ ಎಲ್ಲ ಮನುಕುಲದ ಮತ್ತು ಇಡೀ ಸೃಷ್ಟಿಯ ಮೇಲಿನ ಶರತ್ತಿಲ್ಲದ ಪ್ರೀತಿ ಮತ್ತು ಅವರತ್ತ ಬಂದದ್ದೆಲ್ಲವನ್ನೂ ಸಮಚಿತ್ತದಿಂದ ಒಪ್ಪಿಕೊಳ್ಳುವ ರೀತಿ. ಅವರು ವಿನಯವಂತಿಕೆಯೇ ಮೈವೆತ್ತಿದಂತಿದ್ದರು. ದೈವೇಚ್ಛೆಗೆ ಒಂದು ಸಾಧನವಾಗಿದ್ದ ಅವರಿಗೆ ಯಾವುದೇ ಸ್ವಂತ ಗುರಿಯಿರಲಿಲ್ಲ. ಖಂಡಿತವಾಗಿಯೂ ಅವರು ಒಬ್ಬ ಪರಿಪೂರ್ಣ ಸನ್ಯಾಸಿಯೂ ಮತ್ತು ಸಂಸಾರಿಯೂ ಆಗಿದ್ದರು. ಅವರು ಒಬ್ಬ ಸರ್ವೋತ್ತಮರಾದ ಮಾಸ್ಟರ್. ಗುರೂಜಿಯವರ ಮುಖಾಂತರ ಅವರನ್ನು ನಾವು ತಿಳಿದುಕೊಂಡಿದ್ದೇವೆಯೇ ಅಲ್ಲದೆ ಗುರೂಜಿಯವರ ಮುಖಾಂತರ ಅವರನ್ನು ನೋಡಿದ್ದೇವೆ, ಏಕೆಂದರೆ ಅಮರರವರು ಏನಾಗಿದ್ದರೋ ಅದೆಲ್ಲವನ್ನೂ ಗುರೂಜಿಯವರು ಜೀವಿಸಿದರು. ಅವರು ಅಮರರವರನ್ನು ತಮ್ಮಲ್ಲಿ ಸಂಪೂರ್ಣವಾಗಿ ಮೈಗೂಡಿಸಿಕೊಂಡಿದ್ದರು. ಅವರಿಬ್ಬರ ಉಸಿರು ಮತ್ತು ಆತ್ಮ ಒಂದೇ ಆಗಿತ್ತು.

ಅವರುಗಳು ಹೇಳಿಕೊಟ್ಟಿದ್ದೆಲ್ಲವನ್ನೂ ಆಚರಣೆಗೆ ತರುವುದರಿಂದ ಮತ್ತು ಬೆಳಕಿನ ಮಾರ್ಗದಲ್ಲಿ ನಡೆಯುವುದರಿಂದ ಮಾತ್ರ ಗುರೂಜಿಯವರಿಗೆ ಮತ್ತು ಅಮರರವರಿಗೆ ಅವರಿಂದ ನಾವು ಪಡೆದುಕೊಂಡದ್ದೆಲ್ಲಕ್ಕಾಗಿ ನಮ್ಮ ಪ್ರಾಮಾಣಿಕ ಪ್ರೀತಿ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಬಹುದು. ■

## ಓರ್ವ ಶ್ರೇಷ್ಠ ಮಹರ್ಷಿ

**ಶೋಭಾ ಕೆ.ರಾವ್; ಅನು: ಪಾಂಡುರಂಗ**

ಓರ್ವ ಶ್ರೇಷ್ಠ ಮಹರ್ಷಿ ಅಮರರವರನ್ನು ಗುರೂಜಿಯವರು ನಮಗೆ ಪರಿಚಯಿಸಿದರು. ಅಮರರವರು ತಮ್ಮ ಜೊತೆಯಲ್ಲಿ ಜ್ಞಾನ, ಚೈತನ್ಯ ಮತ್ತು ಪ್ರೀತಿಯ ಒಂದು ಮಹಾಸಾಗರವನ್ನು ತಂದರು. ಅಮರರವರ ಸರಳತೆ, ವಿನಯ ಹಾಗೂ ಋಷಿಗಳೆಡೆಗಿನ ಅವರ ಭಕ್ತಿ ಮತ್ತು ಶರಣಾಗತಿ ನಮಗೆಲ್ಲರಿಗೂ ಮಾದರಿಯಾಗಿದೆ.

ಅಮರರವರು ಜೀವನ ಮತ್ತು ಬದುಕಿಗೆ ಬಹಳ ಪ್ರಾಮುಖ್ಯತೆ ಕೊಡುತ್ತಿದ್ದರು. ಸಂಪತ್ತು, ಭೌತಿಕ ರೂಪದಲ್ಲಿರಲಿ ಅಥವಾ ಜ್ಞಾನ ಮತ್ತು ಚೈತನ್ಯದ ರೂಪದಲ್ಲೇ ಇರಲಿ, ಅದು ಇರುವುದು ಎಲ್ಲರೊಂದಿಗೆ ಹಂಚಿಕೊಳ್ಳಲು ಮತ್ತು ಎಲ್ಲೆಡೆ ಹರಡಲು ಎಂದು ಅವರು ನಂಬಿದ್ದರು. ಸಹಾಯದ ಅವಶ್ಯಕತೆ ಇರುವವರ ಬಗ್ಗೆ ಜನರಲ್ಲಿ ಮೊದಲೇ ಒಂದು ಅಭಿಪ್ರಾಯ ಮತ್ತು ತೀರ್ಮಾನಿಸುವ ಪ್ರವೃತ್ತಿ ಇದ್ದು, ಅವರು ನಂತರ ಸಹಾಯ ಮಾಡಬೇಕೋ ಬೇಡವೋ ಎಂದು ನಿರ್ಧರಿಸುತ್ತಾರೆ. ಆದರೆ, ಕೊಡುವುದು ನಮ್ಮ ಧರ್ಮ; ಪ್ರೀತಿ ನಮ್ಮ ಸ್ವಭಾವ ಎಂದು ಅಮರರವರು ಹೇಳುತ್ತಿದ್ದರು ಮತ್ತು ಈ ಪ್ರೀತಿ ಎಲ್ಲರಿಗೂ ಸಮಾನವಾಗಿ ಸಹಾಯ ನೀಡುತ್ತದೆ. ಅವರು ಯಾವಾಗಲೂ ವಿಸ್ತಾರದ ಸ್ಥಿತಿಯಲ್ಲಿ ಜೀವಿಸುತ್ತಿದ್ದರು. ಜೀವನದ ಪ್ರತಿಯೊಂದು ವಿವರಗಳಲ್ಲಿ ಪರಿಪೂರ್ಣರಾಗಿದ್ದ ಅವರು ಒಬ್ಬ ಶ್ರೇಷ್ಠ ಮಾಸ್ಟರ್.

ಅಮರರವರು ಧ್ಯಾನ ಮತ್ತು ಋಷಿಗಳನ್ನು ನಮಗೆ ಪರಿಚಯಿಸಿದರು. ಧ್ಯಾನಿಗಳಾದ ನಾವು ಸೂಕ್ಷ್ಮಮಟ್ಟದಲ್ಲಿ ಋಷಿಗಳ ಆಸ್ಟ್ರಲ್–ಜಾಲಕ್ಕೆ ಸಂಪರ್ಕ ಹೊಂದಿದ್ದೇವೆ. ಈ ಸಂಪರ್ಕವು, ಋಷಿಗಳು ನಮ್ಮನ್ನು ಗಮನಿಸಲು, ಮಾರ್ಗದರ್ಶಿಸಲು ಮತ್ತು ಅವರಿಂದ ನಾವು ರಕ್ಷಣೆ ಪಡೆಯಲು, ನಮ್ಮನ್ನು ಅರ್ಹರನ್ನಾಗಿಸುತ್ತದೆ. ನಿಜವಾಗಿಯೂ ಇದೊಂದು ದೊಡ್ಡ ವರ! ಧ್ಯಾನಾಭ್ಯಾಸಗಳು ನಮ್ಮ ಬದುಕಿಗೆ ಒಂದು ದಾರಿ ತೋರಿಸಿದೆ, ನಮ್ಮಲ್ಲಿ ಬದಲಾವಣೆಗಳನ್ನು ತಂದಿದೆ. ಇದು ನಮ್ಮ ಜೀವನವನ್ನು ಶಾಂತಿ ಮತ್ತು ಸಂತೋಷದಿಂದ ತುಂಬಿದೆ.

ಅಮರರವರು, ನಾವು ಈಗ ಸಾಗುತ್ತಿರುವ ಪರಿವರ್ತನಾ ಕಾಲದ ಬಗ್ಗೆ ಬಹಳ ಅಪರೂಪದ ಜ್ಞಾನವನ್ನು ಕೊಟ್ಟಿದ್ದಾರೆ. ಈ ಅವಧಿಯಲ್ಲಿ ಬಿಡುಗಡೆಯಾಗುತ್ತಿರುವ ಹೊಸ ಚೈತನ್ಯಗಳು, ಶಾಂತಿ, ಸೌಹಾರ್ದತೆ ಮತ್ತು ಪ್ರೀತಿಯಿಂದ ಕೂಡಿದ ಹೊಸಯುಗವನ್ನು ಪ್ರವೇಶಿಸಲು, ಸಮಸ್ತ ಮನುಕುಲವನ್ನು ಮುನ್ನಡೆಸುತ್ತವೆ. ನಮ್ಮೊಂದಿಗೆ ಆಳವಾಗಿ ಹಾಸುಹೊಕ್ಕಾಗಿರುವ ಅವರ ಆಳವಾದ ಮತ್ತು ಶಾಶ್ವತವಾದ ಪ್ರೀತಿ, ನಾವು ಅವರನ್ನು ಅನುಕರಿಸುವಂತೆ ಮತ್ತು ಅವರು ಕಲಿಸಿದ ರೀತಿಯಲ್ಲಿ ಬಾಳುವಂತೆ, ನಮ್ಮನ್ನು ಮಾರ್ಗದರ್ಶಿಸುವುದನ್ನು ಮುಂದುವರಿಸಿದೆ. ■

## ಜಯಂತ್‌ರವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ.ರಾವ್; ಅನು: ಸುಧಾಕರ್

ಗುರೂಜಿಯವರಿಲ್ಲದಿರುವ ಕೊರತೆ ನಮ್ಮೆಲ್ಲರಿಗೂ ಎದ್ದುಕಾಣುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಅವರಿಲ್ಲದ ಜೀವನವನ್ನು ಊಹಿಸಲಸಾಧ್ಯ. ನಮ್ಮೆಲ್ಲರಿಗೂ ಸಹಜವಾಗಿಯೇ ದು:ಖವಾಗಿದೆ. ಆದರೂ ನಾವು ನಕ್ಕು, ತಮಾಷೆಮಾಡುತ್ತ, ನಲಿದ ಕ್ಷಣಗಳಿವೆ. ಬಹುಶಃ ಅವರು ನಮಗೆ ಚೈತನ್ಯಗಳನ್ನು ನೀಡಿರಬೇಕು. ನಮಗೆ ಮುನ್ನಡೆಯಲು ಹೇಗೋ ಸಾಧ್ಯವಾಗುತ್ತಿದೆ. ಗುರೂಜಿಯವರು ಮತ್ತು ಋಷಿಗಳ ಜೊತೆಯಲ್ಲಿರುವಾಗ ಎಲ್ಲವೂ ಸಾಧ್ಯ.

ನಾವು ಸಕಾರಾತ್ಮಗೊಳ್ಳಲು, ನಾವು ಬೆಳೆಯುವುದಕ್ಕೆ ಸಹಾಯಮಾಡಲು ಮತ್ತು ನಾವು ಹೊಸಯುಗವನ್ನು ಆಯ್ಕೆ ಮಾಡಿಕೊಳ್ಳಲು ಸಹಾಯವಾಗಲು ಋಷಿಗಳು ಅದ್ಭುತ ಚೈತನ್ಯಗಳಿಂದ ಈ ಪ್ರಪಂಚವನ್ನು ತುಂಬುತ್ತಿದ್ದಾರೆ. ಇದರಿಂದ, ಫೋಟಾನ್ ಬೆಲ್ಟ್‌ನ ಚೈತನ್ಯಗಳು ಕಾರ್ಯೋನ್ಮುಖವಾದಾಗ ಅವುಗಳನ್ನು ಮತ್ತು ಗ್ಯಾಲಕ್ಸಿಯ ಕೇಂದ್ರದಿಂದ ಚೈತನ್ಯಗಳನ್ನು ಸ್ವೀಕರಿಸಲು ನಾವು ಸಿದ್ಧರಾಗುವುದಕ್ಕೆ ಸಹಾಯವಾಗುತ್ತದೆ.

ನಾವು ಎದುರುನೋಡುತ್ತ ಕಾಯುತ್ತಿದ್ದ 21ನೇ ಡಿಸೆಂಬರ್ 2012ನ್ನು ದಾಟಿದ್ದೇವೆ. ಅದರ ಬಗ್ಗೆ ಭಯ, ಕಾತರ ಇತ್ತು. ಅಪಾರವಾದ ನಿರೀಕ್ಷೆ ಇತ್ತು. ಮಾಧ್ಯಮದ ಕೆಲವು ವಿಭಾಗದಲ್ಲಿ ಮತ್ತು ಕೆಲವು ಸಿನಿಕ ಜನರಿಂದ ಅಪಹಾಸ್ಯವಿತ್ತು. ಸಹಜವಾಗಿಯೇ ಪ್ರತಿಯೊಬ್ಬರಲ್ಲಿಯೂ ಅನೇಕ ಪ್ರಶ್ನೆಗಳಿವೆ. ಗುರೂಜಿಯವರಿದ್ದಿದ್ದರೆ, ಈ ಎಲ್ಲಾ ಘಟನೆಗಳನ್ನೂ ನಿಯಂತ್ರಿಸುವ ಋಷಿಗಳ ದೃಷ್ಟಿಕೋನವನ್ನು ತಿಳಿಸುತ್ತಿದ್ದರು. ಅದು ಮುಂದೂಡಲಾಗಿದೆಯೇ ಅಥವಾ ರದ್ದಾಗಿದೆಯೇ ಎಂದು ನಮಗೆ ತಿಳಿದಿಲ್ಲ. ಆದರೆ ಪ್ರಜ್ಞಾವಲಯದಲ್ಲಿ ಬದಲಾವಣೆಯುಂಟಾಗಿದೆ.

ಪ್ರಕೃತಿಯಲ್ಲಿ ವಿಶೇಷರೀತಿಯ ಶಾಂತತೆಯಿದೆ ಎಂದು ಜನರು ಹೇಳುತ್ತಿದ್ದಾರೆ. ಒಳಗೆ ಹಾಗೂ ಹೊರಗೆ ಹೆಚ್ಚು ನಿಶ್ಚಲತೆಯಿದೆ. ತಾವು ಸಾಮಾನ್ಯವಾಗಿ ಎದುರಾಡುತ್ತಿದ್ದಂಥ ಅನೇಕ ಸಂದರ್ಭಗಳು ಬಂದರೂ ಅದುಹೇಗೋ ಆ ಸಂದರ್ಭಗಳಲ್ಲಿ ತಾವು ಬೇರೆ ರೀತಿಯೇ ನಡೆದುಕೊಂಡಿದ್ದೇವೆ ಎಂದು ಕೆಲವರು ನನಗೆ ಹೇಳಿದರು. ಅವರು ಜಗಳವಾಡಲಿಲ್ಲ. ಇದು ಒಂದು ದೊಡ್ಡ ಬದಲಾವಣೆ. ನಮ್ಮಲ್ಲಿ ಯಾವುದೋ ಬದಲಾವಣೆ ಉಂಟಾಗಿದೆ, ಅದನ್ನು ನಾವು ಜಾಗರೂಕತೆಯಿಂದ ಗಮನಿಸಬೇಕು. ಅಧರ್ಮದ ವಿರುದ್ಧ ಕೋಪ ಹೆಚ್ಚುತ್ತಿದೆ. ಈ ಕೋಪದ ಅಲೆಗಳನ್ನು ಕಡೆಗಣಿಸಲು ಅಥವಾ ಮುಚ್ಚಿಡಲು ಇನ್ನು ಸಾಧ್ಯವಿಲ್ಲ. ಇವು ಪ್ರಜ್ಞಾವಲಯದ ಬದಲಾವಣೆಗೆ ಸೂಚನೆಗಳಾಗಿವೆ.


ಗ್ಯಾಲಕ್ಟಿಕ್ ಪ್ಲೇನ್ ಒಂದು ದಪ್ಪವಾದ ಪಟ್ಟಿ ಹಾಗೂ ಅದರೊಂದಿಗೆ 1980ರಿಂದಲೂ ಹೊಂದಾಣಿಕೆಯಲ್ಲಿದ್ದೇವೆ ಮತ್ತು ಇದು 2016ರ ತನಕ ಮುಂದುವರೆಯುತ್ತದೆ ಎಂದು ಸೋಮಯಾಜಿಯವರು ಹೇಳುತ್ತಾರೆ. ಅದೇ ರೀತಿ, ಫೋಟಾನ್ ಬೆಲ್ಟ್ ಕೂಡಾ ಚೈತನ್ಯದ ಒಂದು ದಪ್ಪವಾದ ಪಟ್ಟಿ ಹಾಗೂ ಸಾಕಷ್ಟು ಸಮಯದಿಂದ ನಮ್ಮ ಸೌರವ್ಯೂಹದ ಒಂದು ಭಾಗ ಅದರೊಳಗಿದೆ. ನಮ್ಮ ಭೂಮಿ ಸೂರ್ಯನ ಸುತ್ತ ತಿರುಗುತ್ತಿರುವಾಗ ನಾವು ಫೋಟಾನ ಬೆಲ್ಟ್‌ನ ಒಳಗೆ ಹೋಗುತ್ತೇವೆ ಮತ್ತು ಸ್ವಲ್ಪ ಸಮಯ ಅದರಿಂದ ಹೊರಬರುತ್ತೇವೆ. ಮೇ 2012ರ ನಂತರ ನಮ್ಮ ಭೂಮಿ ಪೂರ್ಣವಾಗಿ ಫೋಟಾನ್ ಬೆಲ್ಟ್‌ನ ಒಳಗಡೆ ಇದೆ ಎಂದು ಗುರೂಜಿಯವರು ವಿವರಿಸಿದ್ದರು. ಡಿಸೆಂಬರ್ 21ರಂದು ಇಡೀ ಸೌರವ್ಯೂಹ ಪೂರ್ಣವಾಗಿ ಫೋಟಾನ್ ಬೆಲ್ಟ್‌ನ ಒಳಗಡೆ ಇತ್ತು, ಆದರೆ ಈ ಚೈತನ್ಯಗಳು ಪೂರ್ಣವಾಗಿ ಕಾರ್ಯೋನ್ಮುಖವಾಗಿಲ್ಲ. ಈ ಚೈತನ್ಯಗಳು ಡಿಸೆಂಬರ್ 21ರಿಂದ ಕಾರ್ಯೋನ್ಮುಖಗೊಳ್ಳುತ್ತವೆ ಎಂದು ನಾವು ನಿರೀಕ್ಷಿಸಿದ್ದೆವು. ಈ ಚೈತನ್ಯಗಳ ಕಾರ್ಯೋನ್ಮುಖಗೊಂಡರೆ ಹೆಚ್ಚು ನಾಶವುಂಟಾಗುತ್ತದೆ. ಅದನ್ನು ಯಾವಾಗ ಬಿಡುಗಡೆ ಮಾಡಬೇಕು, ಎಷ್ಟು ಪ್ರಮಾಣದಲ್ಲಿ ಬಿಡುಗಡೆ ಮಾಡಬೇಕು ಎಂಬುದು ಋಷಿಗಳಿಗೆ ಹೆಚ್ಚು ತಿಳಿದಿದೆ.

ಪ್ರಜ್ಞಾವಲಯದಲ್ಲಾದ ಬದಲಾವಣೆ ಜನರಿಗೆ ಸಹಾಯ ಮಾಡುತ್ತಿದೆ. ಆರಿಸಿಕೊಂಡಿರುವವರು ಬದಲಾಗಲಾರಂಭಿಸಿದ್ದಾರೆ. ಆರಿಸಿಕೊಂಡಿಲ್ಲದವರಿಗೆ ಆಯ್ಕೆ ಮಾಡಲು ಅದು ಸಹಾಯಮಾಡುತ್ತದೆ. ಪ್ರಳಯ ಪ್ರಕ್ರಿಯೆಗಳು ತೀವ್ರಗೊಳ್ಳುತ್ತವೆ ಮತ್ತು ಇನ್ನೂ ಹೆಚ್ಚಿನ ಸಹಾಯ ಮುಂದುವರೆಯುತ್ತದೆ. ವ್ಯವಸ್ಥೆಗಳನ್ನು ಸಂಪೂರ್ಣವಾಗಿ ಶುದ್ಧಗೊಳಿಸಲು ಇವುಗಳು ಬೇಕಾಗಿವೆ. ಈ ಪ್ರಕ್ರಿಯೆಗಳು 2016 ಅಥವಾ 2018 ರವರೆಗೆ ಮುಂದುವರೆಯುತ್ತವೆ. ಆದರೆ ಇದರ ಬಗ್ಗೆ ನಾವು ಚಿಂತೆ ಮಾಡಬೇಕಾಗಿಯೇ ಇಲ್ಲ, ಏಕೆಂದರೆ ಗುರೂಜಿಯವರು ಮತ್ತು ಋಷಿಗಳು ನಮ್ಮ ಜೊತೆಯಲ್ಲಿದ್ದಾರೆ. ಗುರೂಜಿಯವರು ಮಾರ್ಗದರ್ಶನವನ್ನು ಸೂಕ್ಷ್ಮ ಮಟ್ಟದಲ್ಲಿ ಮುಂದುವರೆಸುತ್ತಾರೆ. ವೈಭವಯುತವಾದ ಸಮಯದ ಕಡೆಗೆ ನಾವು ಚಲಿಸುತ್ತಿದ್ದೇವೆ ಮತ್ತು ಅತಿಶೀಘ್ರದಲ್ಲಿ ನಮ್ಮ ಸಾಮರ್ಥ್ಯಗಳು ತೆರೆದುಕೊಳ್ಳುತ್ತವೆ. ಒಂದು ದಿನ ಖಂಡಿತವಾಗಿಯೂ ಋಷಿಗಳೊಡನೆ ಸ್ಪಷ್ಟವಾದ ಸಂಪರ್ಕ ಉಂಟಾಗುತ್ತದೆ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 75/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 | 200/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol 4, 5 & 6 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| Pyramid Revelations | 75/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



**ಗುರೂಜಿ ಕೃಷ್ಣಾನಂದ (1939 - 2012)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

**ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ**

ಧ್ಯಾನ ಮಾಡುವ ಸಮಯದಲ್ಲಿ ಮತ್ತು ಧ್ಯಾನದ ನಂತರದ ಕೆಲವು ಗಂಟೆಗಳ ಕಾಲ ನಾನು ವಿಸ್ತರಣೆ, ಅನುಕಂಪ, ಸಂತೋಷ, ಶಾಂತತೆ, ಪ್ರೀತಿ, ಪ್ರಕಾಶಮಾನವಾದ ಬೆಳಕು ಮತ್ತು ಆನಂದ ಅನುಭವಿಸುತ್ತೇನೆ. ಕೆಲವು ಬಾರಿ ಇವುಗಳಲ್ಲಿ ಅನೇಕ ಅನುಭವಗಳು ಒಂದೇ ಸಮಯದಲ್ಲಿ ಆಗುತ್ತವೆ. ಇದಕ್ಕೆ ಮೊದಲು ಒಂದು ಬಾರಿಗೆ ಯಾವುದಾದರೊಂದರ ಅನುಭವವಾಗುತ್ತಿತ್ತು.

ಕೆಲವು ವಾರಗಳ ಹಿಂದೆ ಒಂದು ಶನಿವಾರ ರಾತ್ರಿ, ನಾನು ಆಸ್ಟ್ರಲ್ ತರಗತಿಯೊಂದಕ್ಕೆ ಹಾಜರಾಗಿದ್ದು, ಅದನ್ನು ಮಾರನೆಯ ದಿನ ನೆನಪು ಮಾಡಿಕೊಳ್ಳಲು ಸಾಧ್ಯವಾಯಿತು. ಅಂದು ನನಗೆ ಕರ್ಮದ ನಿಯಮಗಳು ಮತ್ತು ಗುರುವಿನ ಬಗ್ಗೆ ಹೇಳಲಾಯಿತು. ನಂತರದ ಭಾನುವಾರದ ತರಗತಿಯುಲ್ಲಿ ಗುರೂಜಿಯವರು ಅದೇ ವಿಷಯಗಳ ಬಗ್ಗೆ ತಿಳಿಸಿದರು!

– ನಂದಿತಾ ವಿಜಯನ್

ಒಂದು ಹುಣ್ಣಿಮೆಯ ರಾತ್ರಿ, ಧ್ಯಾನದ ನಂತರ ವಿಶ್ರಾಂತಿ ಪಡೆಯಲು ತಲೆ ಕೆಳಗಿಟ್ಟಾಗ, ಕಾಣದ ಕೈಯೊಂದು ನನ್ನ ಕೈಯನ್ನು ಸ್ಪರ್ಶಿಸಿತು. ಆಗ ಅತಿಶಯವಾದುದೇನೋ ನನ್ನೊಳಗೆ ಹರಿಯಿತು ಮತ್ತು ಅದು ನನ್ನನ್ನು ಪ್ರಜ್ಞಾ ಸಾಗರದೊಳಕ್ಕೆ ಕರೆದೊಯ್ಯಿತು. ನಾನು ಅದನ್ನು ಒಂದು ಪ್ರಬಲವಾದ ವಲಯವನ್ನು ಹೊಂದಿದ್ದ ದೈವೀವಸ್ತುವಾಗಿ ಅನುಭವಿಸಿದೆ. ಸಂಪೂರ್ಣವಾಗಿ ವಿಭಿನ್ನವಾದ ಹಾಗೂ ವಿಸ್ಮಯಕಾರಿಯಾದ ಈ ಪ್ರದೇಶದಲ್ಲಿ ಎಲ್ಲದಕ್ಕೂ ನಾನು ಸಾಕ್ಷಿಯಾಗಿದ್ದೆ. ಈ ಅನುಭವ ನನಗೆ ಆಗಾಗ ತಡರಾತ್ರಿಯಲ್ಲಿ, ಅದರಲ್ಲೂ ಹುಣ್ಣಿಮೆಯ ದಿನದಂದು ಖಂಡಿತವಾಗಿಯೂ ಆಗುತ್ತದೆ. ಆಗಾಗ ನನ್ನನ್ನು ಸ್ಪರ್ಶಿಸುವ ಕೈ ಒಂದೇ ಆಗಿದೆ ಎಂದು ನನಗೆ ಈ ಕೈಯ ಸ್ಪರ್ಶ ಮತ್ತು ಅನುಭವದಿಂದ ತಿಳಿಯುತ್ತಿತ್ತು. ನಂತರ ಗುರೂಜಿಯವರು ಅದು ಓರ್ವ ಋಷಿಯ ಕೋಮಲಸ್ಪರ್ಶ ಎಂದು ನನಗೆ ತಿಳಿಸಿದರು!

– ವಿದ್ಯಾ ವಿಶ್ವಾಮಿತ್ರ

ಕೆಲವು ದಿನಗಳ ಹಿಂದೆ ನಾನು ಧ್ಯಾನ ಮಾಡುತ್ತಿದ್ದಾಗ, ನನ್ನ ಶರೀರ ನಿಶ್ಚಲಗೊಂಡು ಮನಸ್ಸು ಅಲೆದಾಡುವುದನ್ನು ನಿಲ್ಲಿಸಿತು. ಆ ಸಮಯದಲ್ಲಿ ಯಾವುದೇ ಯೋಚನೆ ನನ್ನನ್ನು ಕಾಡದೆ, ನನ್ನ ಸುತ್ತ ಪ್ರಕಾಶಮಾನವಾದ ಬೆಳಕನ್ನು ಕಂಡೆ. ಅಲ್ಲಿದ್ದ ಮೌನ ಮತ್ತು ಶಾಂತಿಯು ನನ್ನ ಹೃದಯವನ್ನು ಸಂತೈಸುವಂತಿತ್ತು. ಈ ತೆರನಾದ ಅನುಭವ ನನಗೆ ಆಗಿರುವುದು ಇದೇ ಮೊದಲ ಬಾರಿ ಮತ್ತು ಇದನ್ನು ಇನ್ನೂ ಹೆಚ್ಚು ಅನುಭವಿಸಬೇಕೆಂದು ನಾನು ಬಯಸುತ್ತೇನೆ.

– ಹರಿಲಾಲ್ ದುಧಿಯಾ

ಕೆಲವುಸಲ ಕನಸಿನಲ್ಲಿ ಒಂದು ಬಣ್ಣದ ಗಾಜಿನಂತಿರುವ ಅನೇಕ ಬಣ್ಣಗಳ ಬೆಳಕಿನ ಗೋಲವಿದ್ದಂತೆ ಮತ್ತು ಅದರಲ್ಲಿ ನಾನು ಗುರೂಜಿಯವರನ್ನು ಹಿಂಬಾಲಿಸುತ್ತಿರುವಂತೆ ಅನಿಸುತ್ತಿತ್ತು. ನನಗೆ 77 ಎಂಬ ಸಂಖ್ಯೆಯನ್ನು ಕೊಟ್ಟು, ನನ್ನನ್ನು 'ಎಲ್ಲಾ ಹಂತಗಳಲ್ಲೂ ಮುಕ್ತ' ಎಂದು ಪ್ರಕಟಿಸಿದರು. ಈಗ ನನಗೆ ಭೀತಿ ಕಡಿಮೆಯಾಗಿ, ಅಲ್ಲಿ ಒಂದು ಬಗೆಯ ವಿಸ್ತಾರತೆಯ ಅನುಭವವಾಗಿ ಆಳವಾದ ಉಪಶಮನ ಸಿಕ್ಕಿದೆ. ನಾನೀಗ ಹೆಚ್ಚಾಗಿ 'ಈ ಕ್ಷಣದಲ್ಲಿ ಮತ್ತು ಈ ಸನ್ನಿವೇಶದಲ್ಲಿ' ಇರುತ್ತೇನೆ.

– ಮರ್ಸಿಯಾ ಸ್ಟೊವ್

ಕೆಲವು ದಿನಗಳ ಹಿಂದೆ ವಿಶ್ವಚೇತನ ಮಂದಿರದಲ್ಲಿ ಧ್ಯಾನ ಮಾಡುತ್ತಿದ್ದಾಗ, ಒಂದು ಪ್ರಕಾಶಮಾನವಾದ ಬಿಳಿಬೆಳಕು ಥಟ್ಟನೆ ಹೊಳೆಯಿತು. ನಂತರ ವಿಶ್ವಚೇತನ ಮಂದಿರದ ಮೇಲ್ಭಾಗದಿಂದ ಚಿಲುಮೆಯಂತಹ ಚೈತನ್ಯಗಳು ನನ್ನ ತಲೆಯ ಮೂಲಕ ಪ್ರವೇಶಿಸಿತು. ಆ ಚೈತನ್ಯಗಳು ನನ್ನ ಶರೀರವನ್ನು ತುಂಬಿದಾಗ, ನಾನು ಬೆಳಕಾಗಿ ನನ್ನ ಭೌತಿಕ ದೇಹ ಮರೆಯಾಯಿತು; ನಾನು ಭಾರರಹಿತನಾಗಿ ತೇಲಾಡುತ್ತಿದ್ದೆ. ನನ್ನನ್ನು ಶೂನ್ಯದಿಂದ ಮಾಡಿರುವಂತೆ ಅನಿಸಿ, ನಾನು ಪರಮಾನಂದವನ್ನು ಅನುಭವಿಸಿದೆ.

– ಕಿರಣ್ ನಾಯಕ್

ಕೆಲವು ದಿನಗಳ ಹಿಂದೆ, ಎಲ್ಲೋ ಇಟ್ಟು ಮರೆತಿದ್ದ ಬಹಳ ಮುಖ್ಯವಾದ ಕಾಗದಪತ್ರಗಳನ್ನು ಹುಡುಕುತ್ತಿದ್ದೆ. ತಕ್ಷಣ ನನಗೆ ಬೆಳಕಿನ ಸಹಾಯಪಡೆಯುವಂತೆ ಗುರೂಜಿಯವರು ಹೇಳುತ್ತಿದ್ದ ಮಾತು ನೆನಪಿಗೆ ಬಂತು. ಆಗ ಒಂದು ನಿಮಿಷ ಕಾಲ ನಾನು ಬೆಳಕಿನ ಸಾಗರವನ್ನು ಅನುಭವಿಸುವ ಅಭ್ಯಾಸವನ್ನು ಮಾಡಿದಾಗ, 'ನೀನು ನಿನ್ನ ಮುಖ್ಯ ಕಾಗದಪತ್ರಗಳನ್ನು ಯಾವಾಗಲೂ ಎಲ್ಲಿಡುವೆ?' ಎಂದು ಗುರೂಜಿಯವರು ಕೇಳಿದಂತೆ ಅನಿಸಿತು. 'ನನ್ನ ಲ್ಯಾಪ್‌ಟಾಪ್ ಬ್ಯಾಗಿನಲ್ಲಿ' ಎಂದು ನನ್ನೊಳಗಿನಿಂದ ಉತ್ತರಬಂದಿತು. ನಾನು ತಕ್ಷಣ ಎದ್ದು ಅಲ್ಲಿ ಹುಡುಕಿದಾಗ, ಅಲ್ಲಿ ಕಾಗದಪತ್ರಗಳು ಸಿಕ್ಕಿದವು. ನಾನು ಎಂದೂ ದೇವರನ್ನು ಸಂಪರ್ಕಿಸಲು ನಿಜವಾಗಿಯೂ ಪ್ರಯತ್ನಿಸಿಲ್ಲ ಎಂದು ಈಗ ನನಗೆ ಅರಿವಾಗಿದೆ. ಇಂತಹ ಉತ್ತಮ ಮತ್ತು ಸರಳವಾದ ತಂತ್ರಗಳನ್ನು ನೀಡಿರುವ ಗುರೂಜಿಯವರಿಗೆ ಮತ್ತು ಎಲ್ಲಾ ಋಷಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

– ಅಶುತೋಶ್ ಭಟ್

ನಾನು ಧ್ಯಾನಮಾಡುವಾಗ ಬಹಳ ಸಲ ಪ್ರೀತಿ ಮತ್ತು ಬೆಳಕನ್ನು ನನ್ನೊಳಗೆ ಅನುಭವಿಸುತ್ತೇನೆ. ನಾನು ಬೆಳಕಿನೊಳಗಿರುವಂತೆ ಅನಿಸಿ, ಕೆಲವು ಕ್ಷಣಗಳವರೆಗೆ ನನ್ನ ದೇಹದ ಇರುವಿಕೆಯ ಅರಿವಿಲ್ಲದಂತಾಯಿತು. ಆ ಸಮಯದಲ್ಲಿ ನನ್ನ ಇರುವಿಕೆಯ ಅರಿವಿದ್ದರೂ, ಕೇವಲ ಬೆಳಕನ್ನು ಮಾತ್ರ ಅನುಭವಿಸುತ್ತಿದ್ದೆ. ಇದೊಂದು ಸುಂದರ ಅನುಭವ. ಈ ಅನುಭವ ಹೆಚ್ಚುಕಾಲ ಇರಬೇಕೆಂದೆನಿಸುತ್ತದೆ.

– ರಮಾ ದೇವಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ